# ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

www.karnatakayakshaganaacademy.com

ಪ್ರಾಯೋಜಕತ್ವದಲ್ಲಿ ಪ್ರಕಾಶಿತ

ಯಕ್ಷಗಾನ ಪ್ರಸಂಗ

# ಕಲಾವತಿ ಕಲ್ಯಾಣ

ಕವಿ

## ಮಾರ್ವಿ ಶ್ರೀನಿವಾಸ ಉಪ್ಪೂರ

ಅಂತರಜಾಲ ಆವೃತ್ತಿ ಸಹ-ಪ್ರಕಾಶಕರು ಮತ್ತು ಪ್ರಕಾಶನ ನಿರ್ವಾಹಕರು

ಯಕ್ಷವಾಹಿನಿ®

Email: yakshaprasangakosha@gmail.com

Blog: www.yakshaprasangakosha.com

ಆವೃತ್ತಿ ೧.೦ ನವೆಂಬರ್ ೩೦, ೨೦೧೯

ಯಕ್ಷವಾಹಿನಿ

## ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

**ಗೌರವಾನ್ವಿತ ಸಂಪಾದಕ ಮಂಡಳಿ:**

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ್ ಮುಂಗಳಿಮನೆ

**ಗೌರವಾನ್ವಿತ ಸಲಹಾ ಮಂಡಳಿ:**

ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

**ಕಾರ್ಯಕಾರಿ ಮಂಡಳಿ:**

ರವಿ ಮಡೋಡಿ (ಯೋಜನಾಧ್ಯಕ್ಷ), ಡಾ. ಪ್ರದೀಪ್ ಸಾಮಗ (ಯೋಜನಾ ಕಾರ್ಯದರ್ಶಿ), ನಟರಾಜ ಉಪಾಧ್ಯ (ಯೋಜನಾ ಸಹಕಾರ್ಯದರ್ಶಿ), ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ ನಾ ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಅಶ್ವಿನಿ ಹೊದಲ, ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾ ಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

**ಗೌರವಾನ್ವಿತ ಸ್ವಯಂಸೇವಕರು:**

ಗಣಪತಿ ಭಟ್ ಪಿ, ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರ ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠಿ, ಶ್ರೀಕಾಂತ್ ನಾಯಕ್, ರಘುರಾಜ್ ಶರ್ಮಾ

**ಸಹಕಾರ:**

**ಪ್ರಸಂಗ ಕವಿಗಳು:**

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಮ್. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ವಾಸುದೇವ ಸಾಮಗ, ಎಂ.ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ

**ಕವಿಚರಿತ್ರೆ ಮತ್ತು ಪ್ರಸಂಗಯಾದಿ:**

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣುಭಟ್

**ಸಂಸ್ಥೆಗಳು:**

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ, ಉಡುಪಿ, ಯಕ್ಷಸಿಂಚನ, ಬೆಂಗಳೂರು

**ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:**

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್, ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್ ಎಮ್ ಹೆಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ.ಎಸ್, ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

## ಯಕ್ಷವಾಹಿನಿ ಸಂಸ್ಥೆ

**ಗೌರವಾನ್ವಿತ ಸಲಹಾ ಮಂಡಳಿ:**

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ ನಾ ಭಟ್, ರಾಘವೇಂದ್ರ ಮಯ್ಯ (ಲೆಕ್ಕಪತ್ರ ಪರಿಶೋಧಕರು)

**ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:**

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

**ಆರ್ಥಿಕ ಸಹಾಯ:**

ಅಶೋಕ್ ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

**ಪುಸ್ತಕ ಸಹಾಯ:**

ವಿದುಷಿ ಸುಮಂಗಲ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

Email: yakshaprasangakosha@gmail.com, yakshavahini@gmail.com Blog: www.yakshaprasangakosha.com

## ಮೊದಲ ಮಾತು

ಯಕ್ಷಗಾನ ಪ್ರದರ್ಶನಗಳಿಗೆ ಆಧಾರವಾಗಿರುವುದು ಪ್ರಸಂಗಸಾಹಿತ್ಯ. ಅದು ಯಕ್ಷಗಾನದ ಏಕಮಾತ್ರ ಲಿಖಿತಸಾಹಿತ್ಯವೂ ಹೌದು. ಅದರ ಅಭಾವದಲ್ಲಿ ಯಕ್ಷಗಾನದ ಅಡಿಪಾಯವೇ ಇಲ್ಲವಾಗುತ್ತದೆ. ಈಗ ಅಂದಾಜಿಸಿದಂತೆ ಇಂಥ ಪ್ರಸಂಗಕೃತಿಗಳ ಸಂಖ್ಯೆ ಐದು ಸಾವಿರಕ್ಕೂ ಮಿಕ್ಕಿದೆ. ವರ್ಷವರ್ಷವೂ ನೂರಾರು ಹೊಸಕೃತಿಗಳ ಸೇರ್ಪಡೆಯಾಗುತ್ತಲೇ ಇವೆ. ಆದರೆ ವಿಷಾದದ ಸಂಗತಿಯೆಂದರೆ ಸೂಕ್ತವಾದ ವಿತರಣಾ ವ್ಯವಸ್ಥೆಯಿಲ್ಲ. ಬೇಕೆಂಬುವರಿಗೆ ಪ್ರಸಂಗಗಳು ಲಭಿಸುತ್ತಿಲ್ಲ. ಅನೇಕ ಪ್ರಾಚೀನ ಅರ್ವಾಚೀನ ಕೃತಿಗಳಿಗೆ ಮುದ್ರಣ ಭಾಗ್ಯವಿಲ್ಲ. ಮುದ್ರಿತವಾದ ಕೃತಿಗಳ ಮಾರಾಟ ಮತ್ತಷ್ಟು ತೊಡಕಿನದು. ಹೀಗಾಗಿ ಈಗಾಗಲೇ ಅನೇಕ ಕೃತಿಗಳು ನಾಶವಾಗಿವೆ; ಮತ್ತಷ್ಟು ನಾಶವಾಗುತ್ತಿವೆ.

ಯಕ್ಷಗಾನ ಪ್ರಸಂಗಗಳು ಕನ್ನಡಸಾಹಿತ್ಯದ ಶ್ರೀಮಂತಿಕೆಯ ದ್ಯೋತಕಗಳು. ಕನ್ನಡದಲ್ಲಿ ಬೆಳೆದು ಬಂದ ಛಂದೋ ವೈವಿಧ್ಯದ ಸಾರವನ್ನೆಲ್ಲ ಹೀರಿಕೊಂಡು ಸುಪುಷ್ಟವಾಗಿ ಬೆಳೆದು ನಿಂತ ಈ ಸಾಹಿತ್ಯ ಪ್ರಕಾರವು ಕನ್ನಡಕ್ಕೊಂದು ಹೆಮ್ಮೆ. ಅದರ ಸಿದ್ಧಿ ಸಾಧನೆಗಳನ್ನು ಕುರಿತು ಗಂಭೀರವಾದ ಅಧ್ಯಯನದ ಆವಶ್ಯಕತೆಯಿದೆ. ಆದರೆ ಪ್ರಸಂಗಳ ಅಲಭ್ಯತೆ ಅಧ್ಯಯನಕ್ಕೆ ತೊಡಕಾಗಿದೆ. ಅಧ್ಯಯನಕ್ಕೆ ತೊಡಗುವವರಿಗೆ ಕೃತಿಗಳನ್ನು ಸಂಗ್ರಹಿಸುವುದೊಂದು ದೊಡ್ಡ ಸವಾಲಾಗಿದೆ. ಇದರಿಂದ ಯಕ್ಷಗಾನಕ್ಕೆ ತನ್ಮೂಲಕ ಕನ್ನಡ ಸಾಹಿತ್ಯಕ್ಕೆ ಹಾನಿಯಾಗುತ್ತಿದೆ.

ಇದನ್ನು ಮನಗಂಡ ಯಕ್ಷಗಾನ ಅಕಾಡೆಮಿಯು ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕೈಗೊಂಡಿದೆ. ಅದೇ ಯಕ್ಷಗಾನ ಪ್ರಸಂಗಗಳ ಡಿಜಿಟಲೀಕರಣ. ಎಲ್ಲ ಪ್ರಸಂಗಗಳನ್ನು ಡಿಜಿಟಲೀಕರಣಕ್ಕೊಳಪಡಿಸಿ ಅಕಾಡೆಮಿಯ ವೆಬ್ಸೈಟಿನ ಮೂಲಕ ಆಸಕ್ತರಿಗೆ ಉಚಿತವಾಗಿ ತಲುಪಿಸುವ ವ್ಯವಸ್ಥೆ ಇದು. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಬೇಕಾದ ಕೃತಿಯನ್ನು ಪಡೆದುಕೊಳ್ಳಲು ಯಕ್ಷಗಾನ ಪ್ರಸಂಗವನ್ನು ತೆಗೆದುಕೊಂಡು ಯಕ್ಷಗಾನ ಮಾಡುವವರಿಗೆ ಅತ್ಯಂತ ಅನುಕೂಲ. ಅಧ್ಯಯನಕ್ಕೂ, ಸಂಗ್ರಹಕ್ಕೂ ಅನುಕೂಲ ಹಾಗೂ ಯಕ್ಷಗಾನ ಪ್ರಿಯರಿಗೆ ಆಪ್ತವಾದೀತೆಂದು ಭಾವಿಸಿದ್ದೇವೆ.

ಇದನ್ನು ಕಾರ್ಯಗತಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವು ದೊಡ್ಡದು. ಈ ಕಾರ್ಯಕ್ಕೆ ಯಕ್ಷವಾಹಿನಿ ಸಂಸ್ಥೆಯು ಕೈಜೋಡಿಸಿರುವುದು ಹಾಗೂ ಪುಸ್ತಕರೂಪದಲ್ಲಿ ಯಕ್ಷಗಾನ ಪ್ರಸಂಗವನ್ನು ಸಿದ್ಧಗೊಳಿಸಿಕೊಡುತ್ತಿದೆ. ಇದಕ್ಕೆ ಅಕಾಡೆಮಿಯ ಸರ್ವಸದಸ್ಯರ ಸಹಮತವಿದೆ. ಈ ಯೋಜನೆಯನ್ನು ಕೃತಿರೂಪಕ್ಕೆ ತರಲು ಸಹಕರಿಸಿದವರೆಲ್ಲರನ್ನೂ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರನ್ನೂ, ಸರ್ಕಾರವನ್ನೂ ಹೃತ್ಪೂರ್ವಕವಾಗಿ ನೆನೆಯುತ್ತೇವೆ.



**ಪ್ರೊ. ಎಂ. ಎ. ಹೆಗಡೆ**
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಅಕಾಡೆಮಿ



**ಎಸ್. ಎಚ್. ಶಿವರುದ್ರಪ್ಪ**
ರಿಜಿಸ್ಟ್ರಾರ್
ಕರ್ನಾಟಕ ಯಕ್ಷಗಾನ ಅಕಾಡೆಮಿ

## ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನುಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.



**ಶ್ರೀಧರ ಡಿ. ಎಸ್.**
ಪ್ರಧಾನ ಸಂಪಾದಕರು



**ಗಿಂಡೀಮನೆ ಮೃತ್ಯುಂಜಯ**
ಸಹ ಸಂಪಾದಕರು



**ರವಿ ಮಡೋಡಿ**
ಯೋಜನಾಧ್ಯಕ್ಷರು

## ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ದರ್ಶನವಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರೆಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

**ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು**

**ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ**

**ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ**

**ರವಿ ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ**

# ಸಾರಾಂಶ

**ಪ್ರಸಂಗ ವಿಧ:**

ಕಾಲ್ಪನಿಕ

**ಆಧಾರ ಗ್ರಂಥ:**

ತನ್ನ ಊರಿನ ಪರಿಸರದಲ್ಲೇ ನಡೆದ ಘಟನೆಯನ್ನು ಆಧರಿಸಿ ಬರೆದ ಪ್ರಸಂಗ

**ಭಾಷೆ:**

ಕನ್ನಡ

**ಹಿಂದಿನ ಪ್ರಕಾಶನಗಳ ವಿವರ:**

ಪದವೀಧರ ಯಕ್ಷಗಾನ ಸಮಿತಿ, ಮುಂಬೈ

**ಹಕ್ಕುಸ್ವಾಮ್ಯ ವಿವರ:**

ಈ ಅಂತರಜಾಲ ಆವೃತ್ತಿಯು ವಿಶ್ವದಾದ್ಯಂತ ಉಚಿತವಾಗಿ ಹಂಚಲ್ಪಡುವುದೇ ಜಂಟಿ ಪ್ರಕಾಶಕರ ಘನ ಉದ್ದೇಶವು. ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

**ಒಟ್ಟು ಪದ್ಯಗಳು:**

೩೫೫

**ಪಾತ್ರಗಳು:**

ದುಷ್ಟಬುದ್ಧಿ (ಕುಂಡಲಾವತಿಯ ದೊರೆ), ಧನಪತಿ (ಕನಕಾದಿಯೊಡೆಯರು), ಕರಿಕಂಠ (ದುಷ್ಟಬುದ್ಧಿಯ ಮಂತ್ರಿ), ಚಂದ್ರಶೇಖರ (ಚಕ್ರಾಂಕ ನಗರದ ಅರಸ), ಮಣಿಮಂತ (ಚಿತ್ರಧರೆಯರಸ), ವ್ಯಣಪಾಲ (ಮಣಿಮಂತನ ತಮ್ಮ), ಕಲಾವತಿ (ದುಷ್ಟಬುದ್ಧಿಯ ಮಗಳು), ಮದನ (ದುಷ್ಟಬುದ್ಧಿಯ ಮಗ), ಸುಚೇಲಕ (ಬ್ರಾಹ್ಮಣ), ಪ್ರಚಂಡ (ಅಹಿಪತಿಪುರದ ರಾಜ), ಕುಶಲಮತಿ (ಮದನನ ಶಾಲುಕ), ಮೇದೋಹಿತ (ಬ್ರಾಹ್ಮಣ)

**ಕಥಾಸಾರಾಂಶ:**

ಮಹಾಜಿಪುಣನಾದ ದುಷ್ಟಬುದ್ಧಿ ತನ್ನ ಮಗಳಿಗೆ ಮದುವೆ ಮಾಡಲು ಯೋಚಿಸಿ, ಮಗ ಮದನನ ಶಾಲುಕನು ಕರೆತಂದ ಚಂದ್ರಶೇಖರನಿಗೆ ಕೊಡಲು ಒಪ್ಪುತ್ತಾನೆ. ಆದರೆ ಹಣ

ಖರ್ಚಾಗುತ್ತದೆ ಎಂದು ಚಿಂತೆಯಾಗಿ ಮಂತ್ರಿ ಕರಿಬಂಟನನ್ನು ಕರೆದು ಉಪಾಯವೇನು ಎಂದು ಕೇಳುತ್ತಾನೆ. ಅವನು ಮಣಿಮಂತನ ತಮ್ಮ ವ್ಯಣಪಾಲ ಎಂಬ ಶ್ರೀಮಂತನಿಗೆ ಕೊಟ್ಟಲ್ಲಿ ಅವನಿಂದ ಹಣವನ್ನು ಸೆಳೆಯಬಹುದು ಎಂದು ಬೋಧಿಸುತ್ತಾನೆ. ಚಂದ್ರಶೇಖರ ಬಂದು ಮದುವೆಯ ಬಗ್ಗೆ ಕೇಳಿದರೆ ನೀವು ಮುಂದೆ ಬರದಿದ್ದುದರಿಂದ ಬೇರೆಯವರಿಗೆ ಮಾತುಕೊಟ್ಟಾಗಿದೆ ಎನ್ನುತ್ತಾನೆ. ಕೋಪಗೊಂಡ ಚಂದ್ರಶೇಖರ ಹಣಕ್ಕಾಗಿ ನಿನ್ನ ಮಗಳನ್ನು ಮಾರುವುದು ಸರಿಯಲ್ಲವೆಂದು ಬೈದು ಹೋಗುತ್ತಾನೆ. ಹೆಂಡತಿ ಸುನೀತಿಯೂ ವ್ಯಣಪಾಲ ಮುದುಕ, ಅವನಿಗೆ ಮಗಳನ್ನು ಕೊಡುವುದು ಸರಿಯಲ್ಲ ಎಂದು ಬುದ್ಧಿ ಹೇಳಿದರೆ ಅವಳಿಗೆ ಬೈದು, ಕೊಲ್ಲಲು ಮುಂದಾದಾಗ ಮಗನಾದ ಮದನ ತಡೆಯುತ್ತಾನೆ. ಆ ಮದುವೆಗೆ ಇಷ್ಟವಿಲ್ಲದೇ ಮಗಳು ಕಲಾವತಿ ದುಃಖಿಸುತ್ತಾಳೆ. ಸುಚೇಲನೆಂಬ ಬ್ರಾಹ್ಮಣ ಅವಳ ದುಃಖಕ್ಕೆ ಕಾರಣ ಕೇಳಿ ಸಮಾಧಾನ ಮಾಡಿ ಈಶ್ವರನನ್ನುಆರಾಧಿಸು ಎನ್ನುತ್ತಾನೆ. ಇತ್ತ ದುಷ್ಟಬುದ್ಧಿ ವ್ಯಣಪಾಲನಲ್ಲಿಗೆ ಹೋಗಿ ಮದುವೆ ನಿಶ್ಚಯಿಸಿ ಬರುತ್ತಾನೆ. ಸುದ್ದಿ ತಿಳಿದು ಕಲಾವತಿ ಶೋಕಿಸುತ್ತಾಳೆ. ದುಷ್ಟಬುದ್ಧಿಯು ಮಣಿಮಂತನಿಗೆ ಪತ್ರ ಬರೆದು ಕರೆಸಿಕೊಂಡು ಮಗಳ ಮನಸ್ಸು ಕೆಡಿಸಿ ಅಪಹರಿಸಲು ಪ್ರಯತ್ನ ನಡೆಯುತ್ತಿದೆ ಎಂದು ಹೇಳುತ್ತಾನೆ. ಮಣಿಮಂತ ತನ್ನ ಪುರದಿಂದ ಜನರನ್ನು ಕರೆಸಿ ಕಾವಲಿರಿಸಿ ಧೈರ್ಯ ಹೇಳುತ್ತಾನೆ. ವ್ಯಣಪಾಲನಲ್ಲಿಗೆ ಕುಚೇಲನು ಬಂದು ಅವಳು ನಿನಗೆ ಸಿಕ್ಕುವವಳಲ್ಲ ಎಂದು ಚಾಡಿ ಹೇಳುತ್ತಾನೆ. ಮಣಿಮಂತನು ದಿಬ್ಬಣ ತೆಗೆದುಕೊಂಡು ಬರುತ್ತಾನೆ. ದುಷ್ಟಬುದ್ಧಿ ಮದುವೆ ಸಿದ್ಧತೆ ಮಾಡುತ್ತಾನೆ. ಮಗಳು ಮದುವೆಗೆ ಒಪ್ಪದಿದ್ದಾಗ ಬಲತ್ಕಾರವಾಗಿ ಎತ್ತಿ ಮಂಟಪಕ್ಕೆ ಕರೆದೊಯ್ಯುತ್ತಾನೆ. ಮದುವೆಯಾಗುತ್ತದೆ. ನೆಂಟರಿಷ್ಟರು ಉಂಡು ಹೋಗುತ್ತಾರೆ. ಹಣವೆಲ್ಲವು ಖರ್ಚಾಗಿ ಹೋಗುತ್ತದೆ. ದುಷ್ಟಬುದ್ಧಿಯು ಗ್ರಾಮಾಧಿಕಾರಿಯ ಮನೆಗೆ ಹೋದಾಗ ಮಗಳನ್ನು ಹಾಳುಮಾಡಿದೆ ಎಂದು ಅವಮಾನಮಾಡಿ ಕಳಿಸುತ್ತಾರೆ. ಧನಾಧಿಪತಿಯಲ್ಲಿಗೆ ತೆರಳಿ ತನ್ನ ಸಂಕಟವನ್ನು ದುಷ್ಟಬುದ್ಧಿ ಹೇಳಿಕೊಳ್ಳುತ್ತಾನೆ.

**ಕವಿ ಪರಿಚಯ : (ಆಧಾರ: ಕರ್ನಾಟಕ ಯಕ್ಷಗಾನ ಚರಿತ್ರೆ - ಡಾ. ಕಬ್ಬಿನಾಲೆ ವಸಂತ ಭಾರದ್ವಾಜ ಮತ್ತು ಮೊಮ್ಮಗ ದಿನೇಶ ಉಪ್ಪೂರರು)**

ಶ್ರೀ ಮಾರ್ವಿ ಶ್ರೀನಿವಾಸ ಉಪ್ಪೂರರು (ಕ್ರಿ. ಶ. ೧೮೮೦ – ೧೯೬೦) ಪ್ರಸಿದ್ಧ ಭಾಗವತರಾದ ಪ್ರಾಚಾರ್ಯ ನಾರಣಪ್ಪ ಉಪ್ಪೂರರ ತಂದೆಯವರು. ಇವರು ಶ್ರೀ ವಾಸುದೇವ ಉಪ್ಪೂರರ ಮಗ. ಮಾರ್ವಿ ಹೆಬ್ಬಾರ ಸೋದರರು ಇವರ ಸೋದರ ಅಳಿಯಂದಿರು. ಮಾರ್ವಿ ಶ್ರೀನಿವಾಸ ಉಪ್ಪೂರರು ಬಡಗುತಿಟ್ಟಿನಲ್ಲಿ ಮಾರ್ವಿ ಎಂಬ ಒಂದು ಸ್ವತಂತ್ರ ಶೈಲಿಯನ್ನು ಹುಟ್ಟು ಹಾಕಿದರು. ಇವರ ಕಾಲದಲ್ಲಿ ಹಿಮ್ಮೇಳದವರು ನಿಂತೇ ಹಾಡುತ್ತಿದ್ದರು. ಮಾರ್ವಿ ರಾಮಕೃಷ್ಣ ಹೆಬ್ಬಾರರು, ವಾದಿರಾಜ ಹೆಬ್ಬಾರರು, ಮಕ್ಕಳಾದ ವಾಸುದೇವ ಉಪ್ಪೂರರು ನಾರ್ಣಪ್ಪ ಉಪ್ಪೂರರು ಮೊದಲಾದವರು ಇವರ ಶಿಷ್ಯರು. ರಂಗಸ್ಥಳದಲ್ಲಿ ಭಾಗವತರಾಗಿ ಕಲಾವಿದರನ್ನು ನಿಯಂತ್ರಿಸುತ್ತಿದ್ದುದು ಇವರ ಹೆಗ್ಗಳಿಕೆ. ಆಟದ ಮೊದಲಿಗೆ ಆ ದಿನದ ಪ್ರಸಂಗದ ಕಥಾಸಾರಾಂಶವನ್ನು ಹೇಳುತ್ತಿದ್ದರಂತೆ.

ಇವರು ಬರೆದ ಪ್ರಸಂಗಗಳು: ಕಲಾವತಿ ಕಲ್ಯಾಣ

**ಟಿಪ್ಪಣಿ** :

# ಪ್ರಸಂಗ ಸಾಹಿತ್ಯ

**ಶಾರ್ದೂಲವಿಕ್ರೀಡಿತ ವೃತ್ತ**
ಶ್ರೀಕೃಷ್ಣಂ ಕರುಣಾಕರಂ ಗುಣನಿಧಿಂ ರಾಕೇಂದುತೇಜಾನ್ವಿತಂ |
ನಾಕೇಶಾದ್ಯಮರೌಘವಂದಿತಪದಂ ಲೋಕೈಕನಾಥಂ ಹರಿಂ ||
ಕಾಕುತ್ಸ್ಥಂ ಸುರಥಾಂಗಶೋಭಿತಕರಂ ಮಾಕಾಮಿನೀವಲ್ಲಭಂ |
ಶೋಕಾಂಬೋನಿಧಿಕುಂಭಜಂ ವಿಮಲಶಾಂತಾಕಾರಮೂರ್ತಿಂ ಭಜೇ ||

**ಘಂಟಾರವ - ಆದಿ**
ಶರಣರಕ್ಷಕ ನಿನ್ನ ಚರಣಕ್ಕೆರಗುವೆ ನಾ | ನಾರಸಿಂಹ || ಎನ್ನ |
ಕರುಣದಿ ರಕ್ಷಿಸು ಪರಮಪಾವನದೇವ | ನಾರಸಿಂಹ || 1 ||
ನಂಬಿದ ಭಕುತರಿಗಿಂಬಿತ್ತು ಪೊರೆಯುವ | ನಾರಸಿಂಹ || ನಿನ್ನ |
ಸಂಭ್ರಮದೊಳು ಬಲಗೊಂಬೆ ನಾನನುದಿನ | ನಾರಸಿಂಹ || 2 ||
ಪಂಕಜನಾಭ ಶ್ರೀಪಂಕಜವದನನೆ | ರಕ್ಷಿಸೆನ್ನ || ಪದ |
ಪಂಕಜಕೆರೆಗುವೆ ಕಿಂಕರಜನಪ್ರಿಯ | ರಕ್ಷಿಸೆನ್ನ || 3 ||
ಅಂಬುಜೋದ್ಭವತಾತ ಕಂಬುಕಂಧರಪ್ರೀತ | ತ್ರಾಹಿ ತ್ರಾಹಿ || ನಿನ್ನ |
ನಂಬಿದವರ ಹೃದಯಾಂಬುಧಿಚಂದಿರ | ತ್ರಾಹಿತ್ರಾಹಿ || 4 ||
ಪಾಲಾಬ್ಧಿಶಯನ ಶ್ರೀಲೋಲ ಮಂಗಲರೂಪ | ಪಾಲಿಸೆನ್ನ || ಭಕ್ತ |
ಪಾಲಕ ಭವಭಯಜಾಲನಿವಾರಕ | ಪಾಲಿಸೆನ್ನ || 5 ||

**ಸುರುಟಿ - ಏಕ**
ಕರುಣಿಸು ಗಜವದನ | ಶರಣರ |
ಪೊರೆವ ದಯಾಸದನ ||
ಕರುಣಾಕರ ತವ | ಚರಣಾಂಬುರುಹಕೆ |
ಸೆರಗೊಡ್ಡುತಲಾ | ನೆರಗುವೆನನುದಿನ || 6 ||
ಮೂಷಕವಾಹನನೇ | ನಮಿಸುವೆ |
ಪಾಶಾಂಕುಶಧರನೆ ||
ಶೇಷಭೂಷ ಸುವಿ | ಲಾಸಿಯೆ ತವಪದ |
ದಾಸನಾಗಿಹೆ ಜಗ | ದೀಶ ವಿಭಾಸ್ಯನೆ || 7 ||
ಧರೆಯೊಳಧಿಕವಾದ | ತೀರ್ಥಾದ್ರಿ |
ಶಿರದೊಳು ನೆಲಸಿರ್ದ ||
ವರಗಣಪತಿ ಕಡು | ಕರುಣದೊಳಗೆ ಕಿಂ |
ಕರನಿಗೊಲಿದು ಮನ | ದಿರವನು ಪಾಲಿಸು || 8 ||

**ಭಾಮಿನಿ**
ಶಾರದೆಯ ಭಜಿಸುತ್ತ ಸುಮನಸ |
ವಾರಕಭಿವಂದಿಸುತ ಪಿತೃಚರ |
ಣಾರವಿಂದಕೆ ನಮಿಸಿ ಮಾತೆಯ ಸ್ಮರಿಸಿ ಗುರುವರರ ||
ಚಾರುಪದಕೊಂದಿಸುತ ಮುನಿಜನ |
ಧೀರ ಕವಿಗಳ ನುತಿಸಿ ಧರೆಯೊಳು |
ಕಾರಣಿಕ ಬುಧಜನರ ಪೊಗಳುತ ಕೃತಿಯನೆಸಗುವೆನು || 9 ||

**ವಚನ**
ಇಂತೀ ಪರಿಯಲಿ ಇಷ್ಟದೇವತಾ ಪ್ರಾರ್ಥನೆಯಂ ಗೈದು ಸತ್ಕಥಾ ಸಾರವಂ ಪೇಳ್ವೆನದೆಂತೆನೆ

**ಕೇದಾರಗೌಳ - ಅಷ್ಟ**
ಧರೆಯೊಳಧಿಕವಾದ ವರ ಕುಂಡಲಾವತಿ |
ಪುರಕಧಿಪತಿಯೆನಿಸಿ ||
ಮೆರೆಯುವ ದುಷ್ಟಬುದ್ಧಿಯು ಗೈದ ಚರಿತವ |
ನೊರೆಯುವೆನರಿಯುವಂತೆ || 10 ||

ಶರಧಿಯಾತ್ಮಜೆಯಳ ಕರುಣವ ಪಡೆವೆನಂ |
ದಿರದೆ ಯೋಚಿಸಿ ಮನದಿ ||
ಸ್ಥಿರವಾದ ಮತಿದೋರದಿರಲೊಂದರಿತನು |
ದುರುಳ ಕುಯುಕ್ತಿಯನು || 11 ||
ನೀತಿ ನ್ಯಾಯವ ಪೇಳ್ವ ಖ್ಯಾತನೆನ್ನಿಸಿ ಜನ |
ವ್ರಾತವ ಮೋಹಿಸುತ ||
ಪಾತಕತನದಲಿ ಘಾತಿಯನೆಸಗುವ |
ಭೂತಳದೊಳು ಸತತ || 12 ||
ಇಷ್ಟಮಿತ್ರರು ಬಂಧು ಭಾವವ ಗ್ರಹಿಸದೆ |
ದುಷ್ಟ ದುರಾಗ್ರಹದ ||
ಬಟ್ಟೆಯನೊರೆದು ಮತ್ತೆಳೆವನು ಲಂಚವ |
ನೆಷ್ಟೆಂದು ಬಣ್ಣಿಪೆನು || 13 ||
ಸಾಲವಧಿಕವಾಗಿ ಕಾಲ ಕಳೆಯೆನೆಂದು |
ಬಾಲರ ಕೂಡುತಲಿ ||
ಆಲೋಚನೆಯ ಗೈಯುತಾ ಲಾಭಕಾಸ್ತಿಯ |
ಮೂಲವ ಮಾರಿದನು || 14 ||
ಮನೆಮನೆಗಳ ಪೊಕ್ಕು ಪಂಚಾಯತಿಕೆ ಮಾಡಿ |
ಜನಗಳ ಕೊರಳರಿದು ||
ಗಣನೆಯಿಲ್ಲದ ಧನವನು ತಂದಿರಿಸುತಲಿ |
ಎಣಿಸುವನನುದಿನದಿ || 15 ||
ಒಬ್ಬರ ಬೋಧಿಸುತೊಬ್ಬರ ವಂಚಿಸು |
ತಿಬ್ಬರೊಳ್ ಹಣವೆಳೆದು ||
ಒಬ್ಬರಾಸ್ತಿಯನು ಮತ್ತೊಬ್ಬರಿಗೆಸಗುತ |
ಲುಬ್ಬಿದ ಪ್ಲವಗನಂತೆ || 16 ||

**ಸೌರಾಷ್ಟ್ರ - ತ್ರಿವುಡೆ**

ಇನಿತು ಪರಿಯಲಿ ವಂಚಿಸುತ ಜನ |
ಮನವ ಪರರ್ಯಾರರಿಯದಂದದೊ |
ಳೆಣಿಸಿದರೆ ಈರೈದು ಸಾವಿರ | ಗಣನೆಯಾಯ್ತು || 17 ||
ಆಲೋಕಿಸುವರಿಗಿನ್ನು ತನ್ನಯ |
ಕಾಲ ಸವೆದರೆ ಲೇಸೆನುತ್ತಲಿ |
ಲೀಲೆಯೊಳಗೆಸೆದಿರ್ದ ಮುನಿಮಾ | ರ್ಜಾಲನಂತೆ || 18 ||
ಇನಿತು ಪರಿಯೊಳಗಿರಲು ಕುಮತಿಗೆ |
ತನಯೆಯೊರ್ವಳು ಬೆಳೆಯೆ ಮದುವೆಗೆ |
ಮನದಿ ಯೋಚನೆಗೊಳುತಲಿರ್ದನು | ದಿನದಿನದೊಳು || 19 ||

**ಸಾಂಗತ್ಯ - ರೂಪಕ**

ಕಾಸೊಂದು ಕೈಯಿಂದ ಘಾಸಿಯಾಗದ ಹಾಗೆ |
ಈ ಶುಭಾಂಗಿಯನ್ಯಾವ ವರಗೆ ||
ತೋಷದಿ ಲಗ್ನವ ಲೇಸಿನೊಳೆಸಗುವೆ |
ಹೇ ಸಿದ್ಧಿ ಗಣಪತಿಯೆನುತ || 20 ||
ಮೊದಲೊಂದು ಬಾರಿ ಶಾಕಂಬರಿಗೋಸುಗ |
ಎದೆಗೆಟ್ಟು ಚಿಂತಿಸುತಿರಲು ||
ಒದಗಿಸಿಕೊಟ್ಟಿಹೆ ಕಾಂತನೊಬ್ಬನ ನೀನು |
ತುದಿಗೆ ಧನವ ದೊರಕಿಸಿದೆ || 21 ||

ಇಂದೆನ್ನ ತರಳೆಗಾನಂದವಾಗುವ ತೆರ |
ದಿಂದ ಸಂಘಟಿಸಲ್ಕೆ ವರನ ||
ಒಂದು ಸಹಸ್ರ ಕುಂಭವನರ್ಪಿಸುವೆ ನಾನು |
ಸಿಂಧೂರವದನನಿಗೆಂದ || 22 ||

ಎನುತಲೀಪರಿಯಿಂದ ಪ್ರಾರ್ಥನೆಯನು ಗೈದು |
ಮನುಮಥಾರಿಯ ಭಕ್ತರೆನಿಪ ||
ಕನಕಾದ್ರಿ ಧನಪತಿಗಳಿಗುಸುರುವೆನೆಂದು |
ವಿನಯದಿ ನಡೆತಂದು ಬೇಗ || 23 ||
ಕಣ್ಣೀರ ಸುರಿಸುತ ಪೇಳಿದನೆನ್ನಯ |
ಕನ್ನಿಕೆಯನು ಯಾವ ವರಗೆ ||
ಮುನ್ನ ಕೊಡುವದೆಂಬ ಯೋಚನೆದೋರದೆ |
ಬನ್ನಬಡುವದಾಯಿತೆಂದ || 24 ||
ಘನತೆಯೊಳೀ ಕಾರ್ಯವನು ಕರಿಸುವೆನೆಂದು |
ನೆನೆಸಲು ಬರಿಗೈಯೊಳೀಗ ||
ದಿನವ ನೂಕುವ ಪರಿಯನು ನೀವೆ ಬಲ್ಲಿರೆಂ |
ದೆನುತುಸುರಲು ಪೇಳ್ವರಾಗ || 25 ||
ಚಿಂತಿಸಿ ಫಲವೇನು  ಕಾಂತನೋರ್ವನ ನೀವು |
ಗೊಂತುಮಾಡುತ ಬನ್ನಿರೀಗ ||
ಮುಂತಾಪ ಕಾರಿಯಕ್ಕಾವಿಹೆವೆನುತಲಿ |
ಸಂತಸದಿಂದುಸುರಿದರು || 26 ||

**ಬೇಗಡೆ - ಅಷ್ಟ**

ಎಂದು ಬಹುಪರಿಯಿಂದಲುಸುರುತಲಿ | ಕನಕಾದ್ರಿ ಧನಪರು |
ಚಂದದಲಿ ಮನ ತೋಷಪಡಿಸುತಲಿ ||
ಕುಂದು ಕೊರತೆಗಳೆಲ್ಲ ತ್ಯಜಿಸುತ |
ಲೆಂದು ಮುಂದಿನ ಭರದ ಲಗ್ನಕೆ |
ಒಂದು ನ್ಯೂನತೆಯಾಗದಂದದಿ |
ಅಂದವಾದ ಸುಕಾರ್ಯವೆಸಗಿರಿ || 27 ||
ಕೇಳುತಾ ನುಡಿಯನ್ನು ಸಂತಸದಿ | ಆ ದುಷ್ಟಬುದ್ಧಿಯು |
ತಾಳುತಾನಂದವನು ತನ್ಮನದಿ ||
ಶೀಲಗುಣರಿನಿತೆಂದ ವಚನವೆ |
ಮೇಲೆನುತಲಯ್ಯನಿಗೆ ವಂದಿಸಿ |
ಲೀಲೆಯಲಿ ನಡೆತರುತ ಮನದಲಿ |
ಫಾಲನೇತ್ರನ ಸುತನ  ನೆನೆಯುತ || 28 ||
ಆರಿಗೆನ್ನಯ ಸುತೆಯನೀಯುವೆನು | ಗುಣರೂಪು ಭಾಗ್ಯದಿ |
ಧಾರಿಣಿಯೊಳ್ಕಾಣೆನನ್ಯರನು ||
ಕಾರಣವ ನಾನರಿಯೆನೆನ್ನುತ |
ದಾರಿಯರಿಯದೆ ಚಿಂತೆಯಿಂದಲಿ |
ಘೋರನಾಕ್ಷಣ ಸುತನ ಕರೆದು ವಿ |
ಚಾರಿಸಿದನೀಪರಿಯನೆಲ್ಲವ || 29 ||

**ಕೇದಾರಗೌಳ - ಝಂಪೆ**

ತರಳ ಮದನನೆ ಕೇಳ್ವಿಯ | ಮನದೊಳಿಹ |
ಪರಿಯನರುಹುವೆ ನಿಶ್ಚಯ ||
ತರಳೆಗೆ ಸ್ವಯಂವರವನು | ವಿರಚಿಸಲು |
ಸರಿಬಂತು ಸಮಯವಿನ್ನು || 30 ||
ಆರಿಹರು ಸುತೆಗೊಪ್ಪುವ | ಪುರುಷನಿರ |
ಲಾ ರೀತಿಯರಿತು ನಿಜವ ||
ಕಾರಣವ ಪೇಳ್ವುದೆನಲು | ಪಿತನಾಗ |
ಘೋರನುಸುರಿದನಾಗಲು || 31 ||
ತಂದೆ ಬಿನ್ನಹ ಪೇಳ್ವೆನು | ತರುಣಿಗೆಣೆ |
ಯೊಂದಿರ್ಪ ಪುರುಷನನ್ನು ||
ಇಂದು ನಿರ್ಣಯ ಗೈದಿಹೆ  | ನಾ ಪರಿಯ |
ದಂದವೆಲ್ಲವನುಸುರುವೆ || 32 ||

ಚಕ್ರಾಂಕನಗರದೊಳಗೆ | ನೆಲಸಿರ್ಪ |
ವಿಕ್ರಮನು ಧಾತ್ರಿಯೊಳಗೆ ||
ಶಕ್ರನಣುಗನ ತೆರದಲಿ | ಮಿನುಗುತಿಹ |
ಚಕ್ರವರ್ತಿಯು ಎನುತಲಿ || 33 ||
ಮನುಮಥಾರಿಯ ನಾಮವ | ಧರಿಸುತಲಿ |
ಜನರ ಮೋಹಿಸುತಲಿರುವ ||
ವನಿತೆರೂಪವ ಧರಿಸುವ | ಬೇಕಾದ |
ರೆನಿತು ಕಾರ್ಯವನೆಸಗುವ || 34 ||
ಸುಂದರಾಂಗಗೆ ಭಗಿನಿಯ | ಕೊಡುವ ಮತ |
ವಿಂದು ಬರ್ಪುದು ನಿಶ್ಚಯ ||
ಅಂದವೆನೆ ಮದನನಾಗ | ಪಿತ ಕೇಳು |
ತೆಂದನೀ ಪರಿಯ ಬೇಗ || 35 ||

**ಭಾಮಿನಿ**
ಕಂದ ಲಾಲಿಪುದೀಗಳುಸುರಿದ |
ಸುಂದರಾಂಗನನೆನ್ನ ತರಳೆಗೆ |
ಹೊಂದಿಸುವಯರ್ಾರಿಹರದೀರ್ಡೆ ಪೇಳು ಹರುಷದಲಿ ||
ತಂದೆಯುಸುರುವೆನೆನ್ನ ಶಾಲುಕ |
ಗೆಂದು ಬಂದಿಹೆನವನ ಕೂಡುತ |
ಲಿಂದು ನಾಳಿನೊಳೈತರುವರೆಮ್ಮೆಡೆಗೆ ದಿಟವೆಂದ || 36 ||

**ವಾರ್ಧಕ**
ಇನಿತು ಪರಿಯಲಿ ಮಾತನಾಡುತ್ತಲಿರಲಾಗ |
ಲನಿತರೊಳು ಕುಶಲಮತಿಯೆನಿಪ ಮದನನ ಶಾಲು |
ಕನು ಮುದದಿ ಸೋಮಚೂಡನ ಜತೆಯೊಳೈತರಲು ಘನತೆಯಲಿ ಸತ್ಕರಿಸುತ ||
ವನಿತೆ ಸುತರುಗಳು ಸಹಿತುಪಚರಣೆಯಂ ಗೈದು |
ದಿನನಾಥನಂತೆ ಶೋಭಿಸುವ ಪುರುಷನ ಕಂಡು |
ವನಜನೇತ್ರೆಯ ಭಾಗ್ಯವೆಂದಿರೆ ಕಲಾವತಿಯು ಘನಸಂತಸವ ತಾಳ್ದಳು || 37 ||

**ಸೌರಾಷ್ಟ್ರ - ತ್ರಿವುಡೆ**
ಆ ದಿವಸ ಭೋಜನವನಧಿಕ ವಿ |
ನೋದದಲಿ ಪೂರೈಸುತಾಕ್ಷಣ |
ಆದರಿಸುತಾ ಕುಮತಿಯುಸುರಿದ | ಭೇದವಿಡದೇ || 38 ||
ಬಂಧುತನದೊಳು ಮನವನಿರಿಸಿಹೆ |
ನಿಂದು ನಿಶ್ಚಯ ಸುತೆಯನೀಯುವೆ |
ಚಂದ್ರಶೇಖರನಾಣೆ ವಿಧಿ ಜೊತೆ | ಯೊಂದಿಸಿದರೇ || 39 ||
ಬೇರೆ ಮತವೆನಗಿಲ್ಲ ಭಾಷೆಯ |
ಮೀರಿ ನಡೆಯುವನಲ್ಲವೆಂದಿಗು |
ತಾರತಮ್ಯವನರಿದು ಮನದಿ ವಿ | ಚಾರಿಸುವದು || 40 ||
ಎಂದ ವಚನಕೆ ಪೇಳ್ದನಾಗಳೆ |
ಚಂದ್ರಶೇಖರ ನಿಮ್ಮ ಮನಸಿಗೆ |
ಹೊಂದಿದರೆ ಮಗುಳೇನು ಮನಕಾ | ನಂದವೆಮಗೆ || 41 ||
ಆದರೊಳ್ಳಿತು ಜನ್ಮಪತ್ರವ |
ನೋದಿಸುತ ಸಂಘಟಿಸಿತಾದರೆ |
ಆ ದಯಾನಿಧಿ ಕರುಣದಿಂದಲಿ | ಸಾಧಿಸುವದು || 42 ||
ಒಳ್ಳಿತೆನುತಲಿ ಜನ್ಮಪತ್ರವ |
ನಲ್ಲಿ ಕೊಳ್ಳುತ ಚಂದ್ರಶೇಖರ |
ನಿಲ್ಲದಾಕ್ಷಣವೈದಿದನು ಗೃಹ | ಕುಲ್ಲಸದಲಿ || 43 ||

**ಭಾಮಿನಿ**

ಅಸಮಲೋಚನನತ್ತ ತೆರಳಲು |
ಕುಶಲಮತಿಯೊಡನೆಂದ ಕುಮತಿಯು |
ಹಸನದಾಯಿತು ಸುಂದರಾಂಗನ ಕಂಡು ಕಣ್ಮನಕೇ ||
ಕುಸುಮಗಂಧಿನಿಗೆರಕವಾಗುವ |
ಬೆಸುಗೆಯನು ಸರಿಗೈದು ಬರುವಂ |
ತುಸುರುತಲಿ ಕಳುಹಿಸಿದನುಪಚರಿಸುತ್ತಲತಿಜವದಿ || 44 ||

**ಭೈರವಿ - ಝಂಪೆ**

ಅತ್ತ ಕಳುಹಿಸುತವನ | ಚಿತ್ತದಲಿ ಯೋಚಿಸುತ |
ಮತ್ತೆ ಕುಮತಿಯು ತಿಳಿದ | ನರ್ಥದಾಸೆಯೊಳು || 45 ||
ಏನನುಸುರಿದೆನು ಮತಿ | ಹೀನತನದೊಳಗೀಗ |
ಹೀನತನದೊಳಗಿರ್ಪ | ಮಾನವನ ಕಂಡು || 46 ||
ತಿರಿದುಂಬುವಾತನಿಗೆ | ತರಳೆಯನು ನಾ ಕೊಡಲು |
ಜರೆದು ನಿಂದಿಪರೈಸೆ | ನಿಗತ ಬಾಂಧವರು || 47 ||
ಪರಿಪರಿಯೊಳ್ಯೋಚಿಸುತ | ತ್ವರಿತದಲಿ ಸಚಿವನಹ |
ಕರಿಕಂಠನನು ಕರಸು | ತರುಹಿದನು ಮಗುಳೆ || 48 ||
ತರಳೆಗೊಪ್ಪುವ ವರನ | ಧರೆಯೊಳೆಲ್ಲಿಯು ಕಾಣೆ |
ನರಿತಿರಲು ನೀನೆನಗೆ | ತ್ವರಿತದೊಳಗೊರೆಯೈ || 49 ||
ಎಂದ ಮಾತನು ಕೇಳು | ತಂದು ಯೋಚಿಸಿ ಮನದಿ |
ಚಂದದಿಂದುಸುರಿದನು | ನಿಂದು ಕರಿಕಂಠ || 50 ||

**ಕಾಂಬೋಧಿ - ಝಂಪೆ**

ಲಾಲಿಸೈ ಕುಂಡಾಲಪಾಲ ನಾನೆಂಬ ನುಡಿ |
ಜಾಲವಲ್ಲಿದು ಪೇಳ್ವೆ ನಿಜವ ||
ಬಾಲೆಗನುಕೂಲನಾಗಿಹ ವರನ ನೀನಿನ್ನು |
ಮೇಲೆ ಯೋಚನೆಗೈಯ್ಯಬೇಡ || 51 ||
ಪರದೇಶದೊಳಗುಳ್ಳ ದೊರೆಗಿತ್ತು ವೈವಾಹ |
ವಿರಚಿಸಿದರದು ದೊಡ್ಡಿತಲ್ಲ ||
ಸ್ಥಿರವಾದ ಮನದೊಳೂರೊಳಗೊರ್ವನನು ಕರೆದು |
ಕರುಣಿಸಿದರದು ಬಲು ವಿಹಿತ || 52 ||
ಎಂದ ಮಾತನು ಕೇಳುತಂದು ಕುಮತಿಯು ನುಡಿದ |
ನಂದವಿದು ಆದಡೇಂ ಗೈವೆ ||
ಒಂದು ಕಾಸಿಲ್ಲ ಕರದೊಳಗೆ ನೀನದರಿಂದ |
ಹೊಂದುವಾತನ ತೋರಿಸೀಗ || 53 ||
ಸೂಚಿಸುವೆನದನೊಂದನಂತರಂಗದೊಳೀಗ |
ನಾಚದಿರು ನಿನ್ನ ಚಿತ್ತದಲಿ ||
ಯಾಚಕರ ತೆರದಿ ತೋರ್ಪರು ಜನರ ಕಣ್ಮನಕೆ |
ಭೂಚರ್ಯರಲ್ಲ ನಿರುಕಿಸಲು || 54 ||
ಎಣಿಕೆಯೊಂದಿದೆ ಜೀಯ ಚಿತ್ರಧರೆಯಾಣ್ಮನಹ |
ಮಣಿಮಂತನನುಜನಾಗಿರುವ ||
ವ್ರಣಪಾಲನಿಗೆ ಸುತೆಯ ಗುಣದಿಂದ ಕರುಣಿಸಲು |
ಹಣವೆಳೆಯಬಹುದು ನಿಜವಾಗಿ || 55 ||

**ವಾರ್ಧಕ**

ಇನಿತೆಂದ ವಚನವನ್ನಾಲೋಚಿಸುತ ಕುಮತಿ |
ಮನದಿ ತೋಷವ ತಾಳುತಿದುಸಿದ್ಧ ಭಳಿಭಳಿರೆ |
ಮಣಿಮಂತನಿಗೆ ಪತ್ನಿ ಸುತರಿಲ್ಲ ಬೇಗದಲಿ ವ್ರಣಪಾಲನಿಗೆ ಸುತೆಯನು ||
ವಿನಯದಿಂದೀವೆನೆಂದೆನುತಂತರಂಗದಲಿ |
ಜನುಮಪತ್ರವ ತರಿಸಿ ತನಯರುಗಳೊಡಗೂಡಿ |
ಘನಜವದೊಳಾಗ ಪ್ರಾಚೀನ ಮಿತ್ರನೆನಿಪ್ಪ ವಜ್ರದೇವನ ಕರೆಸಿದ || 56 ||

**ಭಾಮಿನಿ**
ಪರಮ ಮಿತ್ರರೆ ಲಾಲಿಸಿರಿ ನಾ |
ತರಳೆಯಾದ  ಕಲಾವತಿಯನುರೆ |
ಮೆರೆವ ವೃಣಪಾಲನಿಗೆ ಕರುಣಿಸಿ ಕೊಡುವೆನದರಿಂದ ||
ಪುರುಷ ಸ್ತ್ರೀಯಳ ಜನುಮಪತ್ರವ |
ಸರಿಬರುವ ತೆರನಂತೆ ಪರಿಕಿಸೆ |
ಮರೆಯೆ ನಿಮ್ಮುಪಕಾರವೆನ್ನುತ ಚರಣಕೆರಗಿದನು || 57 ||

**ಕೇದಾರಗೌಳ - ಅಷ್ಟ**
ಈ ವಿವರವ ಕೇಳಿ ತೋಷತಾಳುತ ವಜ್ರ |
ದೇವ ಪತ್ರವ ನೋಡುತ ||
ಸಾವಧಾನದೊಳೆಲ್ಲರರಿವಂತುಸುರಿದನು |
ಠೀವಿಯ ಮಾತಿನೊಳು || 58 ||
ಅವಧರಿಸೆಲೆ ಕುಂಡಲಾಧಿಪ ನಿನ್ನಯ |
ಕುವರಿಯ ಭಾಗ್ಯವನು ||
ವಿವರವನುಸುರುವರೆನ್ನಳವಲ್ಲವು |
ತವಕಿಸಿ ನೋಡಲೀಗ || 59 ||
ಸರಿಬರುತಿದೆ ಕೂಟ ಗಣಗಳು ಬೇರೇನು |
ಕೊರತೆಯನೆಣಿಸಬೇಡ ||
ತರಳೆಯನೀಯುವದೊಳಿತೆಂದು ಜವದಲಿ |
ತೆರಳಿದ ಭೂಸುರನು || 60 ||
ಅತ್ತಲು ಭೂಸುರನೈದಲು ಕುಮತಿಯು |
ಚಿತ್ತದಿ ತೋಷಿಸುತ ||
ಅರ್ತಿಯಿಂದಲಿ ವೃಣಪಾಲನಿಗೆನ್ನಯ |
ಪುತ್ರಿಯ ಕರುಣಿಸಲು || 61 ||
ಮನೆಯು ಸಂಪತ್ತು ಕನಕ ಭೂಷಣಂಗಳು |
ತನಯಳ ವಶವಹುದು ||
ಎನಗೀಗ ಸರಿ ಯಾರೆಂದೆನುತಲಿ ಹಿಗ್ಗಿದ |
ಕನಸಿನ ದ್ರುವ್ಯದಂತೆ || 62 ||

**ಸಾಂಗತ್ಯ - ರೂಪಕ**
ಇನಿತು ಸಂತಸ ತಾಳುತಿರುತಿರಲಾಕ್ಷಣ |
ವಿನಯದಿ ಸೋಮಶೇಖರನು ||
ದಿನಪನ ತೆರನಂತೆ ಕುಶಲಮತಿಯ ಕೂಡಿ |
ಘನ ಜವದಲಿ ಬರಲಾಗ || 63 ||
ಕಪಟತನದೊಳೆಲ್ಲರುಪಚರಿಸಿದರಾಗ |
ಚಪಲತನದ ನುಡಿಗಳಲಿ ||
ವಿಪರೀತ ದಿನವಿಷ್ಟು ಸಂದುದು ಬಾರದೆ |
ಕುಫಲವಾಯಿತು ಕಾರ್ಯವೆಂದು || 64 ||
ಎಂದ ಮಾತನು ಕೇಳುತಂದು ಯೋಚಿಸುತಾಗ |
ಚಂದ್ರಶೇಖರನೆಂದನವರ್ಗೆ ||
ಇಂದು ನಿಮ್ಮಯ ನುಡಿಯಂದವ ಗ್ರುಹಿಸಲು |
ಸಂದೇಹವಾಗಿಹುದೈಸೆ || 65 ||
ನಿಮ್ಮ ಮಾತಿನ ಭರವಸದಿಂದಲೈದಿದೆ |
ಸನ್ಮತವಾಪುದೆಲ್ಲರಿಗೆ ||
ಜನ್ಮಪತ್ರವು ಸರಿಬರುತಿದೆ ಪರಿಕಿಸಿ |
ಗಮ್ಮನುಸುರಿರಿ ನಿಮ್ಮಿರವ || 66 ||

**ಭಾಮಿನಿ**
ಎಂದ ವಚನಕೆ ದುಷ್ಟಬುದ್ಧಿಯು |
ಚಂದ್ರಶೇಖರನೊಡನೆ ಪೇಳಿದ |
ನಿಂದು ಪರಿಯಂತರಕು ನಿರುಕಿಸುತಿರ್ದೆ ನಿಮ್ಮೆರವ ||
ಮುಂದುವರಿದಾತ್ಮಜೆಯನುರೆ ಮನ |
ತಂದು ಬೇರೋರ್ವನಿಗೆ ನಿರ್ಣಯ |
ವೆಂದು ಭಾಷೆಯನಿತ್ತಿಹೆನು ಕರಿವದನನಡಿಯಾಣೆ || 67 ||

**ಸೌರಾಷ್ಟ್ರ - ತ್ರಿವುಡೆ**
ಎಂದ ಮಾತಿಗೆ ಕುಶಲಮತಿ ಮನ |
ನೊಂದು ಕೋಪವ ತಾಳಿ ನುಡಿದನು |
ಚಂದದಲಿ ಉಸುರೀಗ ನೀ ಮೊದ | ಲೆಂದುದನ್ನು || 68 ||
ಬಲ್ಲೆ ನಿನ್ನಯ ಠಕ್ಕು ನುಡಿಗಳ |
ನೆಲ್ಲನೊಚಿಸದಿರೀಗಳರಿತೆನು |
ಖುಲ್ಲ ವೃಣಪಾಲನಿಗೆ ಕೊಡುತಿಹು | ದೆಲ್ಲವನ್ನು || 69 ||
ಹೊನ್ನಿನಾಸೆಯನೆಳೆದು ಮನದೊಳ |
ಗನ್ಯರಿಗೆ ನೀನೀವುದುಚಿತವೆ |
ಮುನ್ನವೇತಕೆ ಪೇಳ್ದೆ ಎನ್ನೊಳು | ಪನ್ನಿಯಂತೆ || 70 ||
ವ್ಯರ್ಥ ಒದರದಿರೀಗಳೆನ್ನೊಳು |
ಅರ್ಥವನು ನಾ ಕೇಳುವನಿತನು |
ಅರ್ತಿಯೊಳಗೀಯಲ್ಕೆ ಕೊಡುವೆ ಸು | ಪುತ್ರಿಯಳನು || 71 ||
ದುರಿತ ಪರಿಮಾಣಗಳನರಿಯದೆ |
ನಿರತ ಧನದಾಗ್ರಹದೊಳೊಗೆದಿಹ |
ತರಳೆಯಳ ವಿಕ್ರಯಿಸುತೀರ್ಪೆಯ | ಬರದರಂತೆ || 72 ||
ಎನ್ನ ಚಿತ್ತಕೆ ತೋಚುವನಿತನು |
ಮುನ್ನವೆಸಗುವೆನದರನೀತಿಯ |
ವರ್ಣಿಸಲು ಶುಕ  ಸೂತರಂದದ | ಜ್ಞಾನಿಯೇನೈ || 73 ||
ಹೊರುವಳೇ ಭೂದೇವಿ ನಾಕದಿ |
ತೆರೆವರೇ ಬಾಗಿಲನು ಜಯಸಿರಿ |
ಬರುವಳೇ ಸಮ್ಮುಖಕೆ ಮೋಸವ | ವಿರಚಿಸಿದರೇ || 74 ||
ಮುಚ್ಚು ಛೀ ಮಾತಾಡದಿರು ನೀ |
ಹುಚ್ಚರಂದದೊಳೊದರೆ ನಿನ್ನನು |
ಕೊಚ್ಚಿ ಕಡಿದೀಡಾಡೆ ಮನದೊಳು | ಬೆಚ್ಚನೆಂದ || 75 ||

**ವಾರ್ಧಕ**
ದುಷ್ಟಮತಿ ನೀ ಕೇಳು  ಇಷ್ಟನರಿತಿಹೆ ನಾನು |
ಕೊಟ್ಟು ವಚನವ ತುದಿಗೆ ಭ್ರಷ್ಟ ಮಾತಾಡಿದರೆ |
ಕೆಟ್ಟು ಹೋಗುವೆ ಬೇಡ ಗಟ್ಟಿಯಿಹುದೆಂದು ಶಿರ ಕುಟ್ಟಿ ಸಾಯದಿರು ಬರಿದೆ ||
ಕೊಟ್ಟರೊಳ್ಳಿತು ನಿನಗೆ ಪುಟ್ಟಿಹ ಕಲಾವತಿಯ |
ನಿಷ್ಟವಿಲ್ಲದಿರೆ ಮನ ಬಟ್ಟೆಯರಿಯುತಲಿ ಮಿಗೆ |
ಕಷ್ಟಗೊಳಿಸುವೆನೆನುತ ಚಕ್ರಾಂಕಪುರಪತಿಯನೊಟ್ಟುಗೂಡುತ ಪೊರಟನು || 76 ||

**ಭಾಮಿನಿ**
ಕೇಳುತಾ ನುಡಿಯನ್ನು ಕೋಪವ |
ತಾಳಿ  ಕುಮತಿಯುಸುರ್ದನೆನ್ನಯ |
ಬಾಲೆ ಕಾಯದೊಳಾಪ ಪರಿಗಳ ಕಾಂಬೆನೆಲ್ಲವನು ||
ಖೂಳನಿಲ್ಲದಿರೀಗ  ಜವದಿ ನಿ |
ವಾಳಿಸಿಲ್ಲೆಂದೆನುತ ತನ್ನಯ  |
ಬಾಲಕರನೊಡಗೂಡುತಾಲೋಚಿಸಿದನವರೊಡನೆ || 77 ||

**ಕಾಂಬೋಧಿ - ಝಂಪೆ**

ಕೇಳಿದಿರೆ ನೀವೆಲ್ಲ ಕುಶಲಮತಿ ತಾನೀಗ |
ಖೂಳತನದೊಳಗೆಂದುದೆಲ್ಲ ||
ಭೂಲೋಕ ತಿರುಗಿ ಉರ ಪಾಲಿಸುವ ತಿರುಕನಿಗೆ |
ಬಾಲೆಯನು ಕರುಣಿಸುವ ಛಲವ || 78 ||
ಧನಹೀನನಾಗಿರ್ಪ ಮನುಜನಿಗೆ ಕುವರಿಯನು |
ವಿನಯದಲಿ ಕೊಡಲು ಲೋಕದಲಿ ||
ಘನತೆಯೆಂಬರೆ ಜನರು ಬಿನುಗು ಈ ಪರಿಗಳನು |
ಅನುಮಾನಿಸದೆ ಪೇಳ್ವನೀಗ || 79 ||
ನಮ್ಮ ಹತ್ತಿರದೊಳಿಹ ಹಮ್ಮಿನವರುಗಳ ಮನ |
ವರ್ಮವನು ತಾನರಿವೆನೈಸೆ ||
ಘಮ್ಮನುಸುರಿದರೀಗ ಒಮ್ಮನದೊಳೈತಹರು |
ಸುಮ್ಮನಾದರು ಲಕ್ಷ ಜನರು || 80 ||
ಕನಕಾದ್ರಿಯೊಳಗೀರ್ಪ ಮನಸಿಜಾರಿಯ ಭಜಕ |
ರೆನಿಪ ಧನಪತಿಗಳೆಲ್ಲವರು ||
ವಿನಯದಲಿ ನಮ್ಮನುರೆ ಘನತೆಯಲಿ ಪಾಲಿಪರು |
ಇನಿತು ಕಾರ್ಯಕೆ ಸುಮ್ಮನಿಹರೆ || 81 ||
ಪುಟ್ಟಿಹ ಕಲಾವತಿಯ ಶ್ರೇಷ್ಠ ಕಾರ್ಯದೊಳಾಗ |
ಕಷ್ಟಗೊಳಿಸುವೆನೆಂಬ ಛಲದ ||
ದಿಟ್ಟತನವದನು ಮನವಿಟ್ಟು ಪರಿಕಿಸುವದೆನು |
ತಟ್ಟಹಾಸವ ತಾಳ್ದ ಮನದಿ || 82 ||
ಆದಡೊಂದಿಹುದು ಮನಭೇದದೊಳಗೈದಿಹರು |
ಮೋದ ಮಾತುಳನೊರ್ವನಿಹನು ||
ಸಾಧಿಸದೆ ಬಿಡರವರು ಈ ದಿವಸದಾರಭ್ಯ |
ಕಾದುಕೊಂಡಿರಿಯಾತ್ಮಜೆಯನು || 83 ||

**ಕಂದ**

ಎಂದೀ ಪರಿಯಲಿ ಬಾಯಿಗೆ |
ಬಂದಂದದಿ ಗಳಹುತಿರಲ್ಕಂತಂತಾತನ ||
ಹೊಂದಿದ ರಾಣಿ ಸುನೀತಿಯು |
ಬಂದೆಂದಳು ಪತಿಪದಕಭಿನಮಿಸುತ್ತಾಗಲ್ || 84 ||

**ಸಂವಾದ**

ಲೇಸು ಕಾರ್ಯವಾಯ್ತು ಪ್ರಾ |
ಣೇಶ ನಿಮ್ಮ ಮನಸಿಗೀಗ |
ರೋಷವ್ಯಾಕೆ ಕುಶಲಮತಿಯ | ದೂಷಿಸುವದು || 85 ||
ದೂಷಿಸುವದಲ್ಲವೆ ಪರ |
ದೇಶಿಗೆನ್ನ ಸುತೆಯ ಕೊಡಲು |
ಈಸು ಪಂಥವೇತಕವಗೆ | ಏ ಸುಗುಣಾಢ್ಯೆ || 86 ||
ಸುಂದರಾಸ್ಯ ಲಾಲಿಸಿ ಕೇ |
ಳೆಂದು ಭಾಷೆಯನಿತ್ತೀಗ |
ಸಂಧಿಸಲ್ಕೆ ಸಟೆಯ ದುರಿತ | ಬಂದುಪುದೈಸೆ || 87 ||
ಮಂದಗಮನೆಯೇ ಸ್ವಕಾರ್ಯ |
ಕುಂದದೆಸಗುವಾತನನೃತ |
ದಿಂದ ದುರಿತ ಪರಿಣಾಮಗಳು | ಹೊಂದದು ಸಿದ್ಧ || 88 ||
ಕಾಮರೂಪನಂತೆ ಮೆರೆವ |
ಸೋಮಚೂಡನಿಂಗೆ ಸುತೆಯ |
ಪ್ರೇಮದಿ ನೀ ಕರುಣಿಸೀಗ | ನಮಿಸುವೆ ಕಾಂತ || 89 ||
ರೂಪಿನಿಂದೇನಿಹುದೆಲೇ ನಿ |
ಕ್ಷೇಪಶೂನ್ಯನಿಂಗೆ ಕೊಡೆನು |
ಪಾಪಿ ನಡಿಯೆ ಪರಿಕಿಪೆ ಮುಂ | ದಾಪ ಪರಿಯನು || 90 ||

ಕಂಡು ತಿಳಿದೆ ಪೂರ್ವಾತ್ಮಜೆಯ |
ಗಂಡನೊರ್ವಗಿತ್ತು ಸುಖವ |
ನುಂಡು ಜೀವಿಸಿರ್ಪ ಪರಿಯ | ಖಂಡಿತವಾಗಿ || 91 ||
ಮುಂದೆ ನಿಲದಿರೀಗ ಸುತೆಯ |
ಕಂದನೊರ್ವಗಿತ್ತು ಮಗುಳೆ |
ಹೊಂದಿದೆನೈಶ್ವರ್ಯವದರ | ಅಂದವರಿಯೆಯ || 92 ||
ಧಾರುಣಿಯೊಳು ನಿಮ್ಮಂಥ |
ಕ್ರೂರ ಪಾತಕಿಗಳ ಕಾಣೆ |
ನಾರಿಯರ ವಿಕ್ರಯಿಸಿ ಧನವ | ಸೇರಿಸುವರ || 93 ||

**ಮಾರವಿ - ಏಕ**

ಮಡದಿಯ ನಿಂದ್ಯದ ನುಡಿಯನು ಕೇಳುತ |
ಪೊಡವಿಪ  ರೋಷದೊಳು ||
ಘುಡುಘುಡಿಸುತ ಪಲ್ಕಡಿಯುತಲಾಕ್ಷಣ |
ಹೊಡಕರಿಸುತಲೆಂದ || 94 ||
ಲೋಕದ ಜನಕವಿವೇಕವರುಹಿ ಧನ |
ಸ್ವೀಕರಿಸುವನೆನುತ ||
ಪೋಕನೆಂದೆನುವ ಕುವಾಕನು ಸಂತತ |
ನಾ ಕೇಳುವೆನೈಸೆ || 95 ||
ನಂದನೆಯರ ಕ್ರಮ ಹೊಂದಿಸುತೀಯುವೆ |
ನೆಂದುಸುರಿದಳೆನ್ನ ||
ಹೊಂದಿದ ರಾಣಿಯ ಮನಸಿಗೆ ನೇತ್ರಾ |
ನಂದವ ಮಾಡಿಸುವೆ  || 96 ||
ಎಂದುಸುರುತ ಖಡುಗವನೆಳೆದಾಕ್ಷಣ |
ಹೊಂದಿಡೆ ಗಳಕಾಗ ||
ಮಂದಮತಿಯ ಕರವನು ಪಿಡಿಯುತ ಪಿತ |
ಗೆಂದ ಮದನನಾಗ || 97 ||

**ಭಾಮಿನಿ**

ತಾತ ಲಾಲಿಪುದೀಗ ಸತಿಯಳ |
ಮಾತಿಗೋಸುಗ ತೊರೆಯೆ ಪ್ರಾಣವ |
ಭೂತಳದ ಜನವೃಂದವಾಲಿಸಿ ನಗುವ ತೆರನಾಯ್ತು ||
ನೀತಿಯರಿಯದ ಮೂಢನೇ ನಿನ |
ಗ್ಯಾತಕೀಪರಿ ಮತಿಯೆನುತ ಸಮ |
ಧಾತುಗೊಳಿಸುತ ಸಂತವಿಸಿದನು ಸೆಳೆಯುತಾಯುಧವ || 98 ||

**ನೀಲಾಂಬರಿ - ಆದಿ**

ಇತ್ತ ಕಲಾವತಿಯು | ಈ ಪರಿಯ ಕಾ |
ಣುತ್ತಲಿ ಶೋಕದೊಳು ||
ಚಿತ್ತದಿ ಮರುಗಿದಳು | ಎನ್ನಯ ಪಿತ |
ನಿತ್ತನು ಗರಳವನು || 99 ||
ಚಂದ್ರಶೇಖರನೆಂಬಗೆ | ಆದಿಯೊಳೀವೆ |
ನೆಂದುಸುರುತಲಿ ಹೀಗೆ ||
ಮಂದಮತಿಯ ತಾಳಿದ | ಕೋಪಿಸುತೀಗ |
ನಿಂದಿಸಿ ಕಳುಹಿಸಿದ || 100 ||
ವೃಣಪಾಲನಿಂಗೆನ್ನನು | ಕೊಡುವುದೆಂದು |
ಎಣಿಸಿರ್ಪ ಪಿತನು ತಾನು ||
ಕ್ಷಣವಿರೆ ಜೀವದೊಳು | ಆ ಕುನ್ನಿಗೆ |
ವನಿತೆಯಾದರೆ ಧರೆಯೊಳು || 101 ||

ಆರೊಡನುಸುರುವೆನು | ಈ ಶೋಕವ |
ನ್ಯಾರು ಕೇಳುವರಿದನು ||
ನಾರಿಜನ್ಮವೆ ಸುಡಲಿನ್ನು | ಎನ್ನಳಲನು |
ಗೌರಿಕಾಂತನೆ ಬಲ್ಲನು || 102 ||

**ಭಾಮಿನಿ**

ಇನಿತು ಬಹುಪರಿ ಶೋಕಿಸುತ್ತಿರ |
ಲನಲಪುರದ ನಿವಾಸನಾಗಿಹ |
ಘನ ಸುಚೇಲಕನೆಂಬ ನಾಮದೊಳಿರ್ಪ ಭೂಸುರನು ||
ವನಜಸಂಭವನಣುಗನಂದದೊ |
ಳನವರತ ಮಧುಬಿಂದು ಕಲಹವ |
ಜನರೊಳಗೆ ಗಂಟಿಕ್ಕಿಸುತಲೆಸೆದಿರ್ಪ ಭೂಗಮನ || 103 ||

**ವಾರ್ಧಕ**

ಅತ್ತ ಕುಂಡಲವತಿಯ ಪತ್ತನಕೆ ಬರುತ ಮನ |
ದರ್ತಿಯೊಳಗಾ ಸುಚೇಲನು ಕಲಾವತಿಯ ಕರೆ |
ಯುತ್ತಲುಸುರಿದನ್ಯಾಕೆ ಚಿತ್ತಚಂಚಲವಿಹುದು ಬಿತ್ತರಿಸಬೇಕೆನ್ನಲು ||
ಚಿತ್ತವಿಪುದೆನ್ನೊಡಲಿಗೊತ್ತಿರುವ ಕೊರತೆಯೆನ |
ಗುತ್ತಮದ ಕಾರ್ಯದೊಳು ಮೃತ್ಯುವಾಗಿಹನು ಪಿತ |
ನೆತ್ತಲಾದರು ಪೋಪೆನರ್ಥದಾಸೆಯೊಳೆನ್ನ ಕತ್ತರಿಸನಿವನೆಂದಳು || 104 ||

**ಜಂಜೂಟಿ - ಏಕ**

ಮರುಗದಿರೆಲೆ ಮುದ್ದು ಬಾಲೆ | ಮದ |
ಕರಿಗಮನೆಯೆ ಸುಕಪೋಲೆ ||
ಪರಿಣಯದೊಸಗೆಯೊಳ್ | ನಿರತ ಶೋಕಕೆ ಪಿತ |
ಗುರಿಗೈದನಿದನೆನ್ನೊ| ಳೊರೆಯಲೇನಹುದೀಗ || 105 ||
ಆದಡೊಂದಿಹುದದನೀಗ | ಮುಂದೆ |
ಸಾಧಿಸಿದರೆ ಮನಯೋಗ ||
ಭೇದವಿಲ್ಲದೆ ನೀ ಶು | ಭೋದಯ ಪಡೆಯುವ |
ಹಾದಿಯನುಸುರುವೆ | ನಾದರಿಸಾದಡೆ || 106 ||
ಮುಂತೆಸೆಯುವ ದೇವಾಲಯದಿ | ಗೌರೀ |
ಕಾಂತನ ನೀನನುದಿನದಿ ||
ಸಂತತ ಧ್ಯಾನಿಸು | ತಂತರಿಸದೆಯಿರ |
ಲಂತಕಾಂತಕ ದಯ | ವಾಂತು ಪೊರೆವನೀಗ || 107 ||

**ಸಾಂಗತ್ಯ - ರೂಪಕ**

ಈ ತೆರದಲಿ ಬಹುಪರಿಯಿಂದ ಬೋಧಿಸ |
ಲಾ ತರಳೆಯು ಮನದೊಳಗೆ ||
ಭೂತನಾಥನ ಪಾದ ಪ್ರೀತಿಯೊಳೊಲಿಸುವೆ |
ನೀ ತತುಕ್ಷಣವೆನ್ನುತಾಗ || 108 ||
ಫಲಪುಷ್ಪಾದಿಗಳನ್ನು ಪಿಡಿದುಕೊಂಡಾಕ್ಷಣ |
ನಳಿನಾಕ್ಷಿಯೈತಂದು ಬೇಗ ||
ನಲವಿನೊಳೆಸೆದಿರ್ಪ ಶಿವನ ಸನ್ನಿಧಿಗೈದಿ |
ಸಲಹೆನುತಡಿಗೆರಗಿದಳು || 109 ||
ಅಂಗಜನಂದದೊಳಂಗವಿಸುವ ಪುರು |
ಷಾಂಗನ ದಯೆಯಿಂದಲೆನಗೆ ||
ಸಂಘಟಿಸೆನುತಲಿ ಮಂಗಳಾಂಬಿಕೆ ತಾನು |
ಗಂಗಾಧರನ ಸ್ತುತಿಸಿದಳು || 110 ||

ಈ ರೀತಿಯಲಿ ದಿನದಿನದೊಳಗೈತಂದು |
ಮಾರಹರನ ಪಾದಯುಗವ ||
ನಾರಿ ಭಜಿಸುತಿರಲೊಂದಿನ ಕೇಳ್ದುದು |
ವಾರಿಜಾಕ್ಷಿಗೆ ನಭೋವಚನ || 111 ||

**ಭಾಮಿನಿ**

ಸಾರಸಾಕ್ಷಿಯೆ ಕೇಳು ತವ ಮನ |
ಕೋರಿಕೆಯ ವರನೀಗಲೊದಗನು |
ಸೇರುವದು ಫಲ ಮುಂದೆ ಲೇಸಹುದೀಗ ತೆರಳೆನುವ ||
ಸಾರಿದಂಬರ ನುಡಿಯ ಕೇಳುತ |
ನಾರಿಮಣಿಯೈತರುವ ಪಥದಲಿ |
ಧಾರುಣೀಸುರನೆನಿಪ ಮೇದೋಹುತ ವಿಚಾರಿಸಿದ || 112 ||

**ಆರ್ಯ ಸವಾಯಿ - ಏಕ**

ಸುಂದರಿ ಕೇಳ್ನೀ ದಿನದಿನವಿಲ್ಲಿಗೆ |
ಬಂದುಹೋಗುವ ಪರಿಯೇನೀಗ ||
ಕಂದಿದೆ ಮೊಗವೇನೆಂಬುದನರಿಯೆನು |
ಚಂದದೊಳುಸುರೆನ್ನೊಳು ಬೇಗ || 113 ||
ಬಗೆಬಗೆಯಲಿ ಮನ ದುಗುಡವದೇನಿದು |
ಮಿಗೆ ಮಾಜದೆ ಉಸುರೆನ್ನೊಡನೆ ||
ಮುಗುದೆಯೆ ಮದುವೆಯ ಸೊಗಸೇನೆಂಬುದು |
ಹಗರಣಗೊಳದೀಗಳೆ ನೀನೆ || 114 ||
ಶೋಕಗಳೇನಿದು ರಾಕಾನನೆ ಮನ |
ವ್ಯಾಕುಲವನು ಬಿಡು ಬಿಡು ಜವದಿ ||
ನೀ ಕಳೆಗುಂದದೆ ಜೋಕೆಯೊಳರುಹಲು |
ನಾ ಕಡೆ ಹಾಕಿಸುವೆನು ದಯದಿ || 115 ||
ಯಾರಿಗೆ ಪೇಳುವೆನೆನ್ನಯ ದುಗುಡವ |
ಮಾರಿಯಾದನೆನ್ನಯ ಪಿತನು ||
ಕ್ರೂರ ಪಾಪಿ ವೃಣಪಾಲನಿಗೆನ್ನಯ |
ಧಾರೆಯನೆರೆದು ಕೊಡುತ ತಾನು || 116 ||
ಸೋಮಚೂಡನಿಂಗೀಯುವೆನೆನ್ನುತ |
ತಾ ಮೊದಲರುಹಿದನವನೊಡನೆ ||
ಕಾಮಿಸಿ ಲಾಭಕೆ ಹೋಮಿಸಿ ಕಳುಹುತ |
ಪಾಮರನಾಗಿಹನಿನ್ನೇನು || 117 ||
ಎಂದಾ ವಚನಕೆ ಮೇದೋಹುತ ತಾ |
ನೆಂದನು ಚಿಂತಿಸಬೇಡೀಗ ||
ಇಂದುಧರನ ಕೃಪೆ ಹೊಂದುವದೆನುತಲಿ |
ಅಂದು ಕಳುಹಿದನು ಮನೆಗಾಗ || 118 ||

**ಕೇದಾರಗೌಳ - ಝಂಪೆ**

ಅತ್ತ ಯೋಚಿಸಿಕೊಳುತಲಿ | ದುಷ್ಟಮತಿ |
ಯರ್ಥದಾಸೆಯ ಮನದಲಿ ||
ಚಿತ್ರಪುರಕಾಗಿ ಜವದಿ | ನಡೆತಂದ |
ನುತ್ಸಹವ ತಾಳಿ ಮನದಿ || 119 ||
ಬರವ ಕಾಣುತ್ತಲಾಗ | ಮಣಿಮಂತ |
ನಿರದೆ ಕೈಮುಗಿದು ಬೇಗ ||
ಕರವಿಡಿದು ಕುಳ್ಳಿರಿಸುತ | ಅವರೊಡನೆ |
ಪರಿಪರಿಯ ಪೇಳ್ದನಾಗ || 120 ||

ಎತ್ತಣಿಂದಲಿ ಸ್ವಾರಿಯು | ನಮ್ಮ ಗೃಹ |
ಕಿತ್ತ ಬಂದುದು ಚೋದ್ಯವು ||
ಬಿತ್ತರಿಸಬೇಕು ದಯದಿ | ಎನ್ನೊಡನೆ |
ಅರ್ತಿಯಿಂದಲಿ ಬೇಗದಿ || 121 ||
ಮದುವೆ ಕೆಲಸವು ನಿಮ್ಮಲಿ | ಯಾವಾಗ |
ತುದಿಗೆ ನಿರ್ಣಯಗೈದಿರಿ ||
ಮುದದೊಳ್ಯಾರಿಗೆ ಕೊಡುವಿರಿ | ಸರ್ವವನು |
ಒದಗಿನಿಂದಲಿ ಪೇಳಿರಿ || 122 ||
ಎಂದು ಬಹುಪರಿಯಿಂದಲಿ | ಉಪಚರಣೆ |
ಯಂದು ರಚಿಸಲು ನಲವಿಲಿ ||
ಅಂದು ಮನದೊಳಗಿರ್ದುದ | ದುಷ್ಟಮತಿ |
ಚಂದದಿಂದಲಿ ಪೇಳಿದ || 123 ||

**ಸಾಂಗತ್ಯ - ರೂಪಕ**

ಲಾಲಿಸೈ ಮಣಿಮಂತ ನಾನೆಂಬ ವಚನವ |
ಜಾಲವಲ್ಲದು ನಿಜವಾಗಿ ||
ಮೇಲಾದ ಶುಭಕಾರ್ಯವೊಂದಿಹುದದರಿಂದ |
ಲೀಲೆಯೊಳೈತಂದೆನೀಗ || 124 ||
ಮುದ್ದುಮಗಳನು ನಿನ್ನನುಜನಿಗಿತ್ತು ನಾ |
ನುದ್ಧಾರ ಗೈಯ್ಯಲೋಸುಗದಿ ||
ಎದ್ದು ಬಂದೆನು ನಿನ್ನ ಬಳಿಗಾಗಿ ಮನದೊಳ |
ಗಿದ್ದ ಯೋಚನೆಯುಸುರೆಂದ || 125 ||
ಮೊದಲೊಂದು ಬಾರಿಯೊಳ್ ಒದರಿ ನೀವೀರೀತಿ |
ತುದಿಗೆ ಕೊಟ್ಟಿಹ ಘೋರ ವಿಷವು ||
ಹೃದಯದೊಳಿಹುದಯ್ಯ ಕುದಿಗೊಳ್ಳುತಿದೆ ಮನ |
ಮದುವೆಯ ಗೈದಿರಾದಿಯಲಿ || 126 ||
ಇನಿತೆಂಬ ನುಡಿ ಕೇಳಿ ಕುಮತಿಯು ಪೇಳಿದ |
ನನುಮಾನವೇನಿಲ್ಲ ನುಡಿಗೆ ||
ವಿನಯದಿ ತನಯಳನನುಕರಿಸುವೆನೀಗ |
ವನಜನಾಭನ ಪಾದದಾಣೆ || 127 ||
ಚಂದವಾದ ಸುಮಾವನಂದನೆಯನುಜಗೆ |
ಕುಂದದಿತ್ತರೆ ಮನಕೀಗ ||
ಹೊಂದುವದತಿತೋಷವಲ್ಲದೆ ಗೃಹಜ್ಯೋತಿ |
ಮುಂದುವರಿವಂತಾಯಿತೆಂದ || 128 ||

**ಸೌರಾಷ್ಟ್ರ - ತ್ರಿವುಡೆ**

ಎಂದ ಮಾತಿಗೆ ದುಷ್ಟಮತಿ ಮನ |
ಕಂದು ತೋಷವ ತಾಳಿ ಮಗುಳಿ |
ನ್ನೊಂದನುಸುರುವೆನೆನುತಲುಸುರಿದ | ಚಂದವಾಗಿ || 129 ||
ಎನ್ನ ಮನೆ ಸಂಸಾರ ಜೀವನ |
ವನ್ನು ಗೈಯಲಸಾಧ್ಯವಾಗಿದೆ |
ಇನ್ನು ಯೋಚಿಸಿ ತಿಳಿದುಕೊಳ್ಳೈ | ನಿನ್ನ ಮನದಿ || 130 ||
ತರಳೆಯನು ನಾ ಕೊಡುವುದಾದರೆ |
ವರಹ ಶತಕಾರ್ಧವನು ಹರುಷದಿ |
ಸುರಿಸಿದರೆ ಇನಿತೆಂದ ವಚನವು | ನಿರತ ನಿಜವು || 131 ||
ಎನುತ ನುಡಿಯಾಲಿಸುತ ಬೇಗದೊ |
ಳನುಜನನು ಕರೆದಾಗಳುಸುರಲು |
ಮನದೊಳಿರ್ದುದನೆಲ್ಲ ಉಸುರಿದ | ವಿನಯದಿಂದ || 132 ||

**ಕುಂಭಕಾಂಬೋಧಿ - ಏಕ**

ಅಣ್ಣ ಲಾಲಿಸಿ ಕೇಳು | ಹೆಣ್ಣು ಲಭಿಸಿದರೆ |
ಹೊನ್ನನೀಯುವದಿದು | ಗಣ್ಯವೇನಿನ್ನು || 133 ||
ಸಾಲ ಮಾಡುವದ್ಯಾಕೆ | ಮೂಲವೆ ಸಾಕಿನ್ನು |
ಬಾಲೆಯನಿತ್ತರೆ | ಮೇಲಾದ ಕೆಲಸ || 134 ||
ಹಾಳಾದ ಗೃಹದೊಳು | ಕಾಲ ಮಾಡುವ ಬಗೆ |
ಪೇಳುವದ್ಯಾರಿಗೆ | ತಿಳಿದುಕೊ ಹೀಗೆ || 135 ||
ಎಂದು ಯೋಚನೆಗೈದು | ಕುಮತಿಗೆ ಧೈರ್ಯವ |
ಹೊಂದಿಸಿ ಕಳುಹಿದ | ರಂದು ಮಂದಿರಕೆ || 136 ||

**ಕಾಂಬೋಧಿ - ಝಂಪೆ**

ಬರಬರುತ ಯೋಚಿಸಿದ ಕರಿಮೊಗನು ಕರುಣದಲಿ |
ಕರುಣಿಸಿದನೆನಗೆ ದ್ರವ್ಯವನು ||
ಹರುಷದಿಂದಿತ್ತ ಧನದೊಳಗರ್ಧ ಸರಿಮಾಡು |
ತಿರಿಸುವೆನು ಮಿಕ್ಕುಳಿದುದನ್ನು || 137 ||
ಎಂದು ಹರುಷವ ತಾಳಿ ಬಂದು ತನ್ನರಮನೆಗೆ |
ಕಂದನಾಗಿಹ ಮದನನೊಡನೆ ||
ಅಂದು ಶುಭವಾರ್ತೆಯೆಲ್ಲವನರುಹೆ ಕೇಳಿ ಮನ |
ನೊಂದು ಮರುಗಲು ಕಲಾವತಿಯು || 138 ||
ಎನ್ನನ್ಯಾರಿಗೆ ಮದುವೆಯನ್ನು ರಚಿಸುವಿರಯ್ಯೊ |
ಕುನ್ನಿಯಹ ವೃಣಪಾಲನಿಂಗೆ ||
ಹೊನ್ನಿನಾಸೆಯೊಳು ನೀವಿನ್ನು ನಿರ್ಣಯಗೈದು |
ಎನ್ನ ಕೊರಳನು ಕೊಯ್ವಿರಕಟಾ || 139 ||
ಮಾತೊಂದನಾಡಿದರೆ ಕೇಳಲೊಲ್ಲರು ಹೊಲಸು |
ನಾತ ಮೈಯವನ ಸರ್ವಾಂಗ ||
ನೀತಿಯೊಳು ಸರಿಯಿಲ್ಲದವನ ಪರಿಕಿಸೆ ನೀಚ |
ಜಾತಿ ಸ್ತ್ರೀಯರ ಭೋಗವಂತೆ || 140 ||
ದಂತಹೀನನನು ಮನವೊಲಿದು ನೀವೆನಗೆನುತ |
ಗೊಂತುಮಾಡುತ ಬಂದಿರೈಸೆ ||
ಬಂತು ಕಡೆಗಾಲವೆನಗೊದರಿ ಫಲವಿಲ್ಲೆಂದು |
ದಂತಿಗಾಮಿನಿ ಶೋಕಿಸಿದಳು || 141 ||

**ಭಾಮಿನಿ**

ಎಂದ  ವಚನವನಾಲಿಸುತಲಾ |
ತಂದೆ ನುಡಿದನು ಮಗಳೆ ನಿನಗೆಣೆ |
ಹೊಂದುವವರ್ಯಾರಿಹರದೀರ್ದಡೆ ಪೇಳು ತನಗೆನಲು ||
ಅಂದು ನುಡಿದಳು ಚಕ್ರವತಿಪುರ |
ದಿಂದ ಬಂದಿಹ ಪುರುಷನಲ್ಲದೆ |
ಮಂದಭಾಗ್ಯರನೊಲ್ಲೆನೆನುತಂತೆಂದಳಾ ತರಳೆ || 142 ||

**ವಾರ್ಧಕ**

ಬೇಸರಿಸದೈದಿ ನೀವವರ ಕರೆತಂದು ಎ |
ನ್ನಾಸೆಯನು ಪೂರೈಸದಿರಲೆನ್ನ ಪ್ರಾಣವಂ |
ಘಾಸಿ ಗೈಯ್ಯುವದಲ್ಲದಿರೆನು ಜೀವದೊಳೀಗ ದೋಷಕಂಜೆನು  ದಿಟವೆನೆ ||
ಆ ಸುದತಿಯೆಂದ ವಚನವನಾಲಿಸುತ್ತಲಾ |
ಯಾಸಮಂ ತಾಳುತಲಿ ಇವಳ ಚಿತ್ತವಿದಲ್ಲ |
ಮೋಸವೆಸಗಿದ ಮೂಢರ್ಯಾರೆನುತ ಪುತ್ರನೊಳು ಸೂಸುತಲಿ ಜಲಬಿಂದುವ || 143 ||

**ಮಧುಮಾಧವಿ - ತ್ರಿವುಡೆ**

ಮಗನೆ ಲಾಲಿಪುದೀಗಳೆನ್ನಯ |
ಮಗಳ ಚಿತ್ತವ ಕೆಡುಕು ಗೈದಿಹ |
ಹಗೆಯವರು ತನಗ್ಯಾರು ಪೇಳೈ |
ಬಗೆಯನರಿತಿರಲೆನ್ನೊಳು || 144 ||
ತಂದೆಯರಿತಿಹೆನೈಸೆ ನಮ್ಮಯ |
ಮಂದಿರಕ್ಕೈತಂದನೆನ್ನಯ |
ಹೊಂದಿದವಳಗ್ರಜನ ಕಾರ್ಯವಿ |
ದೆಂದು ತೋರ್ಪುದು ಮನಸಿಗೆ || 145 ||
ಚಕ್ರಪುರದ ನಿವಾಸನಾಗಿಹ |
ವಿಕ್ರಮನನೊಡಗೂಡುತೈತಂ |
ದೊಕ್ರಗತಿಯೊಳಗೆನ್ನ ಭಗಿನಿಗು |
ಪಕ್ರಮಿಸಿದನು ಬೋಧೆಯ || 146 ||
ಕೂಡಿಹರು ನಾಲ್ಕೈದು ಜನರುಗ |
ಳೋಡಿಸಲು ಮನ ಮಾಡಿಹರು ಗಡ |
ನಾಡ ಮಾತುಗಳಲ್ಲ ದಿಟವೆಂ |
ದಾಡುವರು ಕೆಲಬಲದೊಳು || 147 ||

**ಮಾರವಿ - ಏಕ**

ಕಂದನ ವಚನವನಾಲಿಸುತಾಕ್ಷಣ |
ತಂದೆಯು ಕೋಪದಲಿ ||
ನಂದನೆಯಳ ಮನದಂದವ ಕೆಡಿಸಲು |
ಬಂದಿಹುದದು ದಿಟವೇ || 148 ||
ಹಿತವೈರವನೆಣಿಪತಿ ದುರ್ಮತಿಗಳ |
ಕ್ಷಿತಿಯೊಳಗಿರಗೊಡೆನು ||
ಅತಿಚಲ ಪಥದಲಿ ಸುತೆಯನ್ನೊಯ್ದರೆ |
ಗತಿಗಾಣದೆ ಬಿಡೆನು || 149 ||
ಎನ್ನಯ ಪರಿಯರಿಯದೆ ಕೆಣಕುವರೈ |
ಕುನ್ನಿಗಳಂದದಲಿ ||
ಉನ್ನತ ಧನಪರ ಬಲಮೆನಗಿರುತಿರೆ |
ಮಣ್ಣಿಗೆ ಕೂಡಿಸುವೆ || 150 ||
ಆರಿಂದಾಗುವದೇನದ ನಿರುಕಿಸಿ |
ನಾರಿಗೆ ಲಗ್ನವನು ||
ಪೂರೈಸದೆ ಬಿಡೆನೆನ್ನುತ ತರಳೆಗೆ |
ಪೇರಿಸಿದನು ಮಗುಳೆ || 151 ||

**ಸೌರಾಷ್ಟ್ರ - ಅಷ್ಟ**

ಆರೇನನುಸುರಿದರಾಲಿಸದಿರು ಮಾತ | ಮುದ್ದು ಕೇಳೆ || ನಿನ್ನ |
ಭೂರಿ ಸಂತಸವ ನಾನೆಸಗುವೆನಿದು ಸಿದ್ಧ | ಮುದ್ದು ಕೇಳೆ || 152 ||
ಗೆಜ್ಜೆಪಟ್ಟೆಯನೀಗ ವಿರಚಿಸುತೀಯುವೆ | ಒಳ್ಳೆ |
ಪ್ರಜ್ವಲಿಸುವ ಹಸ್ತಕಡಗವನಿಡಿಸುವೆ | ಮುದ್ದು ಕೇಳೆ || 153 ||
ಪಟ್ಟೆಶಾಲೆಯನೀಗಲುಡಿಸುವೆನಿದು ದಿಟ | ಮುದ್ದು ಕೇಳೆ || ಮನ |
ವಿಟ್ಟೀಗ ವ್ರಣಪಾಲನಿಂಗರ್ಧಾಂಗಿನಿಯಾಗು | ಮುದ್ದು ಕೇಳೆ || 154 ||
ತಿರಿದುಂಡು ಜೀವಿಪ ಪುರುಷನ ನೋಡುತ್ತ | ಮುದ್ದು ಕೇಳೆ || ಮನ |
ಮರುಳಾಗಿ ಶೋಕದಿ ಹೊರಳುವದಿದು ಸಲ್ಲ | ಮುದ್ದು ಕೇಳೆ || 155 ||
ನೆರೆಹೊರೆಯವರೆಲ್ಲ ಪರಿಕಿಸಿ ನಗುವರು | ಮುದ್ದು ಕೇಳೆ || ನಿನ್ನ |
ಪೊರೆದ ತಾಯ್ತಂದೆಯ ಮರುಗಿಸದಿರು ಬಾಲೆ | ಮುದ್ದು ಕೇಳೆ || 156 ||

**ಭೈರವಿ - ಝಂಪೆ**

ಬಲ್ಲೆ ಬಲ್ಲೆನು ನಿಮ್ಮ ಬಾಯ ಪನ್ನಿಗಳನ್ನು |
ಸೊಲ್ಲಿಸದಿರೀ ಕಾರ್ಯವೆಲ್ಲವರಿತಿಹೆನು || 157 ||
ಗತಸಮಯದೊಳಗೆಸಗಿದತಿ ಕರ್ಮಗಳನೀಗ |
ಹಿತದಿ ನಾನೊಂದೊರೆಯೆ ಧೃತಿಗೆಡುವಿರೈಸೆ || 158 ||
ಎನ್ನಗ್ರಜೆಗೆ ಶಾಲುಕನು ಕೊಟ್ಟು ಶಾಲೆಯನು |
ಮುನ್ನ ವಿಕ್ರಯಿಸಿದಿರಿ ಹೊನ್ನಿನಾಸೆಯೊಳು || 159 ||
ದಾಗೀನುಗಳಿಗೆನುತಲಾಗಲಿತ್ತಿಹ ಧನವ |
ನೀಗಲೊಂಚಿಸಿ ಶಿರವ ಬಾಗಿಸುವಿರೈಸೆ || 160 ||
ಋತುಕಾರ್ಯವೆಸಗಿದಿರಿ ಹಿತದ ನೆಂಟರನುಳಿದು |
ಮತಿಗೆಟ್ಟು ಚೋರರಂತತಿ ಲೋಭತನದಿ || 161 ||
ಮುಂದೆನ್ನ ಮನಸಿಗಾನಂದಗೊಳಿಸುವ ನುಡಿಯು |
ಸಂದೇಹಕರವೆಂದು ಹೊಂದಿದಳು ಧರೆಗೆ || 162 ||

**ನವರೋಜು - ಏಕ**

ಶೋಕಿಸಬೇಡೆಲೆ ಮಗುವೆ | ನಾ |
ಬೇಕಾದುದನು ಕೊಡುವೆ ||
ಕಾಕುಜನರ ನುಡಿ ನೀ ಕೇಳದೆ ಮನ |
ವ್ಯಾಕುಲವನು ಬಿಡು ನೀ ಕಳೆಗುಂದದೆ || 163 ||
ಎನ್ನಯ ಮಾನವನುಳಿಸು | ಗುಣ |
ರನ್ನೇ ಸಂತಸಪಡಿಸು ||
ಇನ್ನು ನೀನುಸುರಿದ ತೆರದೊಳೆಸಗುವೆನು |
ಬನ್ನಣೆ ನುಡಿಯೆನುತೆಣ್ಣಿಕೆಗೊಳದಿರು || 164 ||
ಈ ಪರಿ ಬೋಧಿಸಿ ಮತ್ತಾ | ಮುಂ |
ದಾಪ ಕಾರ್ಯಕೆನುತ್ತ ||
ಸೋಪಸ್ಕರವನು ಒದಗಿಸುವಂದದೊ |
ಳೀಪರಿಯಾಜ್ಞೆಯನಿತ್ತನು ಸುತರೊಳು || 165 ||

**ಕಾಂಬೋಧಿ - ಝಂಪೆ**

ಅನಿತರೊಳು ಮಣಿಮಂತನನುನಯದಿ ಹಣಗಳನು |
ವಿನಯದಲಿ ಕೊಂಡು ಬರಲಾಗ ||
ಎಣಿಕೆಗೈದಿರಿಸಿ ಸಂತಸವಾಂತು ಲಗ್ನಕ್ಕೆ |
ದಿನವ ನಿರ್ಣಯ ಗೈದರಾಗ || 166 ||
ಎಂದಿಗೀ ಕಾರ್ಯವನು ಹೊಂದಿಸುವುದೆನುತ ಮನೆ |
ಮಂದಿಗಳನೊಡಗೂಡುತಾಗ ||
ದುಂದುಭಿಯ ಜ್ಯೇಷ್ಠಶುಕ್ಲದ ನವಮಿ ರವಿವಾರ |
ವೊಂದಿಹುದು ಶುಭದಿವಸವೆನುತ || 167 ||
ನಿಶ್ಚಯಿಸಿ ವೀಳೆಯವನಿತ್ತು ಮಣಿಮಂತನಿಗೆ |
ಸಚ್ಚರಿತ ಶುಭಕಾರ್ಯಮಿದಕೆ ||
ಬೆಚ್ಚದಿರು ಮನದಿ ದಿಬ್ಬಣವನೊಡಗೊಂಡು ಜನ |
ಮೆಚ್ಚುವಂದದೊಳೈತರುವದು || 168 ||
ಎಂದುಸುರಿ ಕಳುಹಿಸುತಲಂದು ಕುವರನೊಳೆಂದ |
ಬಂಧುವರ್ಗಕೆ ಪೇಳದಿರಲು ||
ನಂದನೆಯ ಮನವು ಸರಿಹೊಂದದದರಿಂದ ನೀ |
ಮುಂದಾಗಿ ಹೊರಡು ಹೇಳಿಕೆಗೆ || 169 ||
ಅಸ್ತೆನುತಲಪ್ಪಣೆಯ ಕೈಕೊಂಡು ನಂಟರಿಗೆ |
ಅರ್ತಿಯೊಳಗುಸುರುತಿರಲಾಗ ||
ಸುತ್ತಲಿರುತಿರ್ಪ ಸನ್ಮಿತ್ರರಾದರಿಗೆಲ್ಲ |
ವಿಸ್ತಾರ ಪತ್ರಿಕೆಯ ಕಳುಹೆ || 170 ||

**ದ್ವಿಪದಿ**

ಅನಿತರೊಳು ಮನದೊಳಗೆ ಯೋಚನೆಯ ಮಾಡಿ ||
ಘನವಾದ ರಾಜಕಾರ್ಯಕೆನೆ ದಯಗೂಡಿ || 171 ||
ವಿನಯದಲಿ ಸೋದರಳಿಯನಿಗೆ ಲೇಖನವ ||
ಘನ ಜವದಿ ಕಳುಹೆ ಕಂಡರು ಚರರು ಪುರವ || 172 ||
ರಾಜನೋಲಗದೊಳಿರೆ ಕಂಡು ಶಿರಬಾಗಿ ||
ಮಾಜದಾಗಳೆ ಪೇಳ್ದರೆಲ್ಲರೊಂದಾಗಿ || 173 ||

**ಮುಖಾರಿ - ಏಕ**

ಲಾಲಿಸಿ ಕೇಳಹಿಪತಿಪುರ ದೊರೆಯೆ | ಸೌಭಾಗ್ಯದ ಸಿರಿಯೆ |
ಲಾಲಿಸಿ ಕೇಳಹಿಪತಿಪುರ ದೊರೆಯೆ || ಪ ||
ಕುಂಡಲಾಧಿಪತಿ ಕುಮತಿ ತಾನು | ನಿಮ್ಮ ಮಾತುಳನು |
ಚಂಡವಿಕ್ರಮನಾಗಿರುತಿಹನು ||
ಗಂಡುತನದಿ ಶುಭಕಾರ್ಯವ ಯೋಚಿಸಿ |
ಕೊಂಡೀಗಲೆ ನಿಮ್ಮೆಡೆಗೆಮ್ಮನು ಸಲೆ |
ಖಂಡಿತದಲಿ ಲೇಖನವೀಯುತ ಕರ |
ಕೊಂಡು ಬರುವ ತೆರವಂದದೊಳರುಹಿದ || 174 ||
ಎನುತಲೀ ಪರಿ ಪತ್ರಿಕೆಯನು | ಘನಜವದೊಳು ತಾನು |
ವಿನಯದೊಳ್ ಬರಿಸಿ ಕರಣೀಕರನು ||
ಘನ ಸೌರಂಭದೊಳೆನಗಾ ಮಾತುಳ |
ನನುನಯದಲಿ ಕಳುಹಿದ ಲೇಖನವನು |
ಸನುಮತದಿಂದಲಿ ವಾಚಿಸಿರೆನಲಾ |
ಜನಪತಿಯಾಜ್ಞೆಯೊಳೋದುತಲಿರ್ದರು || 175 ||

**ಕಾಂಬೋಧಿ - ಝಂಪೆ**

ಶ್ರೀ ರಾಜಮಾನ್ಯ ಮಹರಾಜ ಅಹಿಪತಿಪುರದ |
ಭೂರಮಣನಹ ಪ್ರಚಂಡನಿಗೆ ||
ಧಾರುಣಿಪ ಕುಂಡಲಾಧಿಪ ದುಷ್ಟಮತಿಯು ದಯ |
ದೋರುತಲಿ ಗೈವೆನಾಶಿಷವ || 176 ||
ಇದುವರೆಗೆ ನಾವು ಕರಿವದನನ ಕಟಾಕ್ಷದಲಿ |
ಪದುಳದಿಂದಿರುತಿಹೆವು ನಿನ್ನ ||
ಸುದತಿ ಪರಿವಾರದಭ್ಯುದಯವನು ಸೂಚಿಸುತ |
ಮುದದೊಳಿತ್ತಪುದುತ್ತರವನು || 177 ||
ಇದೆ ಜ್ಯೇಷ್ಠಶುಕ್ಲ ನವಮಿಯ ದಿನದಿ  ಪುತ್ರಿಯನು |
ಚದುರನಹ ವೃಣಪಾಲನಿಂಗೆ ||
ಮುದದಿ ಧಾರೆಯನೆರೆದುಕೊಡುವೆ ನೀನದಕಾಗಿ |
ಒದಗಿನೊಳಗೈತರುವುದೀಗ || 178 ||
ಬಂಧುತನದೊಳು ಕೆಲರು ಮಂದಮತಿಯನು ತಾಳಿ |
ನಂದನೆಯ ಮನವ ಸೆಳೆದಿಹರು ||
ಬಂದು ನೀನದಕಾಗಿ ಹೊಂದಿಸುತಲೀ ಕಾರ್ಯ |
ದಂದವನು ಪೂರ್ಣವೆಸಗುವುದು || 179 ||
ಎನುತಲೀಪರಿಯಿಂದ ವಾಚಿಸಲು ಕೇಳುತ್ತ |
ಜನಪನಹನಾ ಪ್ರಚಂಡಕನು ||
ಮನಸಿಜಾರಿಯ ತೆರದಿ ಘನರೋಷ ತಾಳುತಾ |
ಕ್ಷಣವೆ ಹೊರವಂಟನರಮನೆಯ || 180 ||

**ಶಂಕರಾಭರಣ - ಮಟ್ಟೆ**

ಬಂದ ಬರವನರಿದು ಕುಮತಿ ತೋಷ ತಾಳಿದ |
ಮುಂದುವರಿದು ಕರೆದು ತಂದು ಉಪಚರಿಸಿದ || 181 ||

ಮಂದಭಾಗ್ಯನಾದೆನೊಂದು ಕಾರ್ಯವೆಣಿಸುತ |
ಮುಂದೆ ಮನದ ಯೋಚನೆಯ ಉಸುರು ನೀನದ || 182 ||
ತಿಳಿದೆನೈಸೆ ನಿಮ್ಮ ಪತ್ರಿಕೆಯನು ಕಾಣುತ |
ಕಳವಳಿಸಲು ಬೇಡಿ ಪೇಳ್ವೆನೆನ್ನ ಅಭಿಮತ || 183 ||
ಕೇಡ ಬಗೆದ ಮೂಢರ್ಯಾರು ಪೇಳಿ ನೀವದ |
ನೋಡಬಹುದು ಕೈಯಗುಣವನಾಡಲೇನದ || 184 ||
ಎಂದ ಮಾತ ಕೇಳಿ ಕುಮತಿ ಹೊಂದಿ ಧೈರ್ಯವ |
ಚಂದದಿಂದ ಪೇಳ್ವನಾಗಳಂದು ವಿವರವ || 185 ||

**ಭೈರವಿ - ಝಂಪೆ**

ಕೇಳೈ ಪ್ರಚಂಡಕನೆ | ಪೇಳಲೇನದನೀಗ ||
ತಾಳಿರ್ಪ ದುಗುಡವನು | ಬಾಲೆ ಕಾರ್ಯದೊಳು || 186 ||
ತರಳೆಯನು ಕದ್ದೊಯ್ವ | ಪರಿ ಯೋಚಿಸಿಹರಂತೆ ||
ಪರಿಣಯದ ಕಾರ್ಯದಲಿ | ಕೊರತೆಗೊಂಡಿಹೆನು || 187 ||
ಕೂಡಿಹರು ನಮ್ಮವರೆ | ನಾಡಜನ ಕೆಲರೆಲ್ಲ ||
ವಾಡಲೇನಿಹುದೀಗ | ನೋಡು ತವ ಮನದಿ || 188 ||
ಸುಂದರಾಂಗಿಯಳ ಮನ | ದಂದವನು ಕೆಡಿಸಿಹರು ||
ಮಂದಮತಿಯನು ತಾಳಿ | ಬಂಧುಗಳೆ ಕೆಲರು || 189 ||
ಏನೇನನೆಸಗುವರೊ | ನೀನದನು ನಿರುಕಿಸುತ |
ಹಾನಿಯಾಗದ ತೆರದಿ | ಮಾನ ಸಲಹುವುದು || 190 ||
ಎಂದು ಶೋಕವ ತಾಳ | ಲಂದು ಪರಿಕಿಸುತಾಗ |
ನಿಂದು ರೋಷವ ತಾಳು | ತೆಂದನಾಕ್ಷಣದಿ || 191 ||

**ಭೈರವಿ - ಏಕ**

ಬಿಡು ಚಿಂತೆಯ ಮಾತುಳನೆ | ಈ |
ಹುಡುಗಿಯ ಕಾರ್ಯದೊಳಾನೇ ||
ಕೆಡುಕರು ನಡೆತರಲೀಗ | ನಾ |
ಬಡಿದಪ್ಪಳಿಸುವೆ ಬೇಗ || 192 ||
ಖುಲ್ಲತನವ ಗೈವರನು | ನಾ |
ಹಲ್ಲ ಮುರಿವೆ ದಿಟವಿನ್ನು ||
ಮಲ್ಲ ಸಹಸರಿರೆ ಬೇಗ | ಕ್ಷಣ |
ದಲ್ಲಿ ತೋರಿಸೆನಗೀಗ || 193 ||
ಬಗೆಬಗೆ  ತಂತ್ರದೊಳೀಗ | ತೆಗೆ |
ಬಗೆ ಮಾಡುವೆನತಿ ಬೇಗ ||
ಸೊಗಸಾಗಿರು ನೀ ಮನದಿ | ನಿ |
ನ್ನಗಲದೆಯಿಹೆನೆಡಬಲದಿ || 194 ||

**ಭಾಮಿನಿ**

ಎಂದು ಬಹುಪರಿಯಿಂದ ಧೈರ್ಯವ |
ನಂದೊರೆದು ಬಳಿಕಹಿಪತಿಯ ಪುರ |
ದಿಂದ ಬರಿಸುತಲಖಿಳ ಸೈನ್ಯವ ನಿಲಿಸುವನಿತರೊಳು ||
ಮುಂದುವರಿಯುತ ಖೂಳರೈತರೆ |
ಕೊಂದು ಬಿಸುಡುವೆನವರನೆನುತಲಿ |
ನಿಂದು ಪೌರುಷವಾಡುತಿರಲಾ ಜನಪ ಯೋಚಿಸಿದ || 195 ||

**ಕೇದಾರಗೌಳ - ಅಷ್ಟ**

ಕನಕಾದ್ರಿಯೆಡೆಗೆ ನಾನ್ಯೈದುತ್ತಲೀಗಳೆ |
ಧನಪತಿಗಳಿಗರುಹಿ ||
ವಿನಯದೊಳೆಲ್ಲರೈತರುವಂತೆಸಗಿ ಬರ್ಪೆ |
ನೆನುತಲಿ ಪೊರಮಟ್ಟನು || 196 ||
ಕದಳಿ ಫಲವು ಶರ್ಕರಾದಿ ಸುವಸ್ತುವ |
ಮುದದಿ ತಾ ಪಿಡಿದುಕೊಂಡು ||
ಎದೆಯಾರಿದವನಂತೆ ಬಂದುಸುರಿದನಾಗ |
ಮದುವೆಯ ಹೇಳಿಕೆಯ || 197 ||
ಮತ್ತೊಬ್ಬಯಾರ್ರಾರು ಬರಲಿ ಬಾರದಿರಲಿ ಸ |
ಮಸ್ತರು ನೀವೈತಂದು ||
ಅರ್ತಿಯೊಳ್ ಪೂರೈಸಿಕೊಡಬೇಕು ದಯೆಯಿಂದ |
ಉತ್ಸಾಹ ಕಾರ್ಯವನ್ನು || 198 ||
ಮಗಳ ಚಿತ್ತವು ಬೇರಾಗಿಹುದು ಈ ಕಾರ್ಯದ |
ತೆಗೆಬಗೆಯೇನೆಂಬೆನು ||
ಸೊಗಸಿನೊಳ್ ಕಲ್ಮಶ ತೆಗೆಸುವಿರೆಂದೆಂಬ |
ಬಗೆಯೊಳು ನಂಬಿಹೆನು || 199 ||
ಹೀಗೆಂಬ ನುಡಿ ಕೇಳಿ ಶಿರವದೂಗುತಲನು |
ರಾಗದೊಳುಪಚರಿಸಿ ||
ದಾಗೀನುಗಳ ಬೇಕಾದುದನಿತ್ತು ಕಳುಹಿದ |
ರಾಗಳೆ ದಯವಂತರು || 200 ||

**ಶಂಕರಾಭರಣ - ಆದಿ**

ಆ ಸಮಯದೊಳು ಚಿತ್ರೇಶನ ಬಳಿಗೆ ||
ತೋಷದಿ ನಡೆತಂದನಾ ಸುಚೇಲಕನು || 201 ||
ಬರವ ಕಾಣುತಲಾಗಲೆರಗಿ ಕೈಮುಗಿದು ||
ಪರಿಪರಿಯುಪಚರಿಸಿದನವ ನಲಿದು || 202 ||
ಬರವೇನು ಕಾರಣವೇನಿಹುದೀಗ ||
ಅರಿತಿರಲ್ವೊಸ ವಾರ್ತೆಯರುಹಿರಿ ಬೇಗ || 203 ||
ಧಾರುಣಿಪಾಲನ ನುಡಿಯನಾಲಿಸುತ ||
ಭೂರಿ ಸಂತಸ ತಾಳುತೆಂದನೀ ಮಾತ || 204 ||

**ಬೇಗಡೆ - ಅಷ್ಟ**

ಲಾಲಿಸೆಲೆ ಮಣಿಮಂತ ಭೂವರನೆ | ನಾನೀಗ ನಿನ್ನೊಳು |
ಪೇಳುವುದನೆಲ್ಲವನು ಗುಣಯುತನೇ ||
ಮೇಲು ಕಾರ್ಯವನೆಣಿಸುತಲಿ ಕುಂ |
ಡಾಲಪಾಲಕನಾತ್ಮಜೆಯ ವ್ಯಣ |
ಪಾಲನಿಗೆ ನಿರ್ಣಯವ ಗೈದು ವಿ |
ಶಾಲಮತಿಯಿಂದಿರ್ಪೆ ನಿಶ್ಚಯ || 205 ||
ಲೋಕಸಮ್ಮತದಿಂದ ತರಳೆಯನು | ವೈವಾಹವೆಸಗುತ |
ಠೀಕಿನೊಳಗೊಳಗೊಳುವ ಬಗೆಯಿನ್ನು ||
ಸಾಕು ಬಿಡುಬಿಡು ತಿಳಿಯೆಯಾ ನೀ |
ನಾ ಕುಮತಿಯನು ಖಳನು ಗುಣವ ನಿ |
ರಾಕರಿಸುವನು ಸರ್ವಥಾ ನಿನ |
ಗಾಕೆ ಸೇರುವಳಲ್ಲ ದಿಟವಿದು || 206 ||
ತರುಣಿಯಳ ಮನದಿರವು ಬೇರಿಹುದು | ನಿನ್ನನುಜನಿಂಗವ |
ಳರಸಿಯಾಗುವ ಪರಿಯು ಸಲ್ಲದಿದು |
ನಿರತ ಕೆಲಬಲವಿರ್ದ ಮನುಜರು |
ಬೆರಸುವರು ದುರ್ಮತಿಯನವಳಿಗೆ |
ಹರನ ತಂತ್ರದೊಳೀಗ ದೊರೆತರು |
ಸರುವಥಾಯಿರಲವಳು ನಿಜವಿದು || 207 ||

**ಘಂಟಾರವ - ಅಷ್ಟ**

ಎಂದ ಮಾತನು ಕೇಳುತ್ತ ಖತಿಯೊಳು ||
ಅಂಧಕಾರಿಯ ತೆರದಿ ಕೋಪದೊ |
ಳೆಂದನಾಗ ಸುಚೇಲಗೆ || 208 ||
ಕೊಟ್ಟ ಮಾತಿಗೆ ತಪ್ಪಿ ನಡೆದರೀಗ ||
ಸೃಷ್ಟಿಯೊಳು ಬಾಳುವನೆ ಕುಮತಿಯ |
ದಿಟ್ಟತನ ಪರಿಕಿಸುವೆನು || 209 ||
ಬಾಲೆಗೋಸುಗ ಧನವನಿತ್ತಿಹೆನು ಹೇ ||
ರಾಳವಾಗಿಯೆ ಕುಹಕವೆಸಗಲು |
ಸೀಳಿ ಬಿಸುಡದೆ ಬಿಡುವೆನೇ || 210 ||
ಎನ್ನ ಮಿತ್ರನಾಗಿಹನೊಕ್ರಮತಿಯೈಸೆ ||
ಮುನ್ನ ತಾಮ್ರಾಕ್ಷಾದಿ ಪಟುಭಟ |
ರನ್ನು ಕರೆಸುವೆನೀಕ್ಷಣ || 211 ||
ಎಂದು ಪೌರುಷವಾಡಿ ಸುಚೇಲನ ||
ನಂದು ಬೀಳ್ಕೊಟ್ಟಾಗ ಮನದೊಳ |
ಗಂದು ಯೋಚಿಸುತಿರ್ದನು || 212 ||

**ಸೌರಾಷ್ಟ್ರ - ತ್ರಿವುಡೆ**

ಚಿತ್ರಪುರದಾಣ್ಮಕನು ಚಾರರೊ |
ಳುತ್ತಮದ ಲೇಖನವನೀಯುತ |
ಲತ್ತ ಕಳುಹಿದನರ್ತಿಯಲಿ ಸ | ನ್ಮಿತ್ರನಿಂಗೆ || 213 ||
ಘನಜವದೊಳೈತಂದು ಚಾರರು |
ಮಣಿಗಿರಿಯ ಪುರದೊಕ್ರಮತಿಯೆಂ |
ದೆನಿಪ ಭೂಪನಿಗೆರಗಿ ಪೇಳ್ದರು | ವಿನಯದಿಂದ || 214 ||
ಧೊರೆಯೆ ಲಾಲಿಪುದೆಮ್ಮ ಪತ್ರವ |
ಹರುಷದಿಂದೊಹಿಸೆನುತಲೀಯಲು |
ಬರೆದ ವಿವರವನೋದುತಿರ್ದನು | ಧರಣಿಪತಿಯು || 215 ||
ಚಾರಕರ ಮನ್ನಿಸುತ ಕುಮತಿಯ |
ಗಾರುಗೆಡಿಸುವೆನೆನುತ ಮನದೊಳು |
ಭಾರಿ ರೋಷವ ತಾಳುತಿರ್ದನು | ಧೀರತನದಿ || 216 ||
ತೆರಳಬೇಕೆಂದೆನುತ ತನ್ನಯ |
ತರಳನಹ ಕಾಳಿಂಗನೆಂಬನ |
ಪುರದ ಕಾವಲಿಗಿಡುತಲೈದಿದ | ತರುಣಿ ಸಹಿತ || 217 ||

**ಭಾಮಿನಿ**

ಬರಬರುತ ಯೋಚಿಸಿದನೆನ್ನಯ |
ತರಳನಿಗೆ ಪರಿಣಯವನೆಸಗಲು |
ಮೆರೆವ ಗ್ರಾಮಾಧಿಪನ ಕುವರಿಯ ಕೇಳ್ವೆನತಿಹಿತದಿ ||
ಭರವಸವ ತಾನಿತ್ತನಂತ್ಯದಿ |
ಕೊರಳನರಿದಿಹನವರ ತೆರದಲಿ |
ಪರಮಮಿತ್ರನನೇನ ಗೈವನೊ ಕುಮತಿಯೆಂದೆನುತ || 218 ||

**ಕಾಂಬೋಧಿ - ಝಂಪೆ**

ಬರಲು ಕಾಣುತ ಚಿತ್ರಪುರದಧಿಪನತಿ ಜವದಿ |
ಕರವಿಡಿದು ಕುಳ್ಳಿರಿಸುತಾಗ ||
ಪರಿಪರಿಯೊಳುಪಚರಿಸಿ ಹಸಿವು ತೃಷೆಯಪಹರಿಸಿ |
ಮರುಕಗೊಳುತಿಂತೆಂದನವಗೆ || 219 ||
ವರಕುಂಡಲಾಧಿಪನ ತರಳೆಯಭಿಮತವೀಗ |
ಪರಿಕಿಸಲು ಬೇರಿರ್ಪುದಂತೆ ||
ಪೊರೆದ ಪಿತನೇನನೆಸಗುವನೆಂಬ ಸೂಚನೆಯ |
ಅರಿವಿಲ್ಲದಾದೆ ತಾನೆಂದ || 220 ||

ಎಂದ ವಚನವ ಕೇಳುತಂದೊಕ್ರಮತಿಯುಮವ |
ಗೆಂದನಾ ಕುಮತಿ ಲೇಸಿನೊಳು ||
ನಂದನೆಯನಿತ್ತರೊಳ್ಳಿತುಮಿಲ್ಲದಡೆ ನೋಳ್ಪೆ |
ಮುಂದಾಪ ಪರಿಗಳೆಲ್ಲವನು || 221 ||
ನಾರಿಯೊಡಬಡದಿರಲು ಘೋರನೆಳೆತಂದೀಗ |
ಧಾರೆಯೆರೆಯುವೆ ನಿನ್ನನುಜಗೆ ||
ಬೇರೆ ಮಾತಿಲ್ಲ ಮಿತಿಮೀರಿ ಬರುವವರನುರೆ |
ಸೇರಿಸುವೆನಂತಕನ ಪುರಿಗೆ || 222 ||
ನಡೆಯಲೀಕ್ಷಣದಿ ದಿಬ್ಬಣವೆನುತ ಪೇಳುತಿರ |
ಲೊಡನೆ ಸಂತಸವ ತಾಳುತಲಿ ||
ಸಡಗರದೊಳಿಷ್ಟಮಿತ್ರರಿಗೆಲ್ಲ ಲೇಖನವ |
ನೊಡನೆ ಕಳುಹಿಸಿದನತಿ ಜವದಿ || 223 ||

**ಸಾಂಗತ್ಯ - ರೂಪಕ**

ಅತ್ತಲು ಕುಂಡಾಲಪುರದೊಳು ವೈವಾಹ |
ಕರ್ತಿಯೊಳೆಸೆವ ಚಾವಡಿಯು ||
ಮತ್ತೆ ಚಪ್ಪರದ ಮೇಲ್ಕಟ್ಟುಗಳೆಸೆಯಲು |
ಸುತ್ತ ಜಲ್ಲಿಯ ಪತಾಕೆಗಳು || 224 ||
ಭೂರಿ ಶೋಭಿತಮಾದ ಮಂಟಪವನು ಗೈದು |
ತೋರಣಗಳನೆಡೆಬಿಡದೆ ||
ಸೇರಿಸಿ ಶೃಂಗಾರವಾಗಿ ರಚಿಸಲಾಗ |
ಕೋರೈಸೆ ಜನರ ಕಣ್ಮನಕೆ || 225 ||
ನೂತನವೆನಿಪ ಕತ್ತುರಿ ಗಂಧ ಪನ್ನೀರು |
ಜಾತಿಯ ಪರಿಪರಿ ಸುಮವ ||
ಪ್ರೀತಿಯೊಳ್ ತರಿಸಿದನಾತ್ಮಜೆಯಳ ಮನ |
ಕಾತುರವಾಗುವಂದದಲಿ || 226 ||
ಇಷ್ಟಮಿತ್ರರು ಬಂಧುಜನ ಸಹ ಕೂಡುತ |
ಅಷ್ಟದಿಕ್ಕಿನೊಳಗೈತರಲು ||
ತಟ್ಟನಾಕ್ಷಣದೊಳಗುಪಚರಿಸುತ ಮಗು |
ಳಿಟ್ಟರು ಕ್ರಮುಕ ಪರ್ಣವನು || 227 ||
ಭೂತಪಾಂಡ್ಯನಿಗಾದಿ ಶಿಷ್ಯರೈತರಲರಿ |
ದಾತುರದಿಂದವರವರ ||
ಪ್ರೀತಿಯೊಳುಪಚರಿಸಿಹ ಕುಜನರ ನ್ಯಾಯ |
ನೀತಿಯನೇನ ಬಣ್ಣಿಪೆನು || 228 ||

**ಸೌರಾಷ್ಟ್ರ - ತ್ರಿವುಡೆ**

ನರ್ತಕರು ಗಾಯಕರು ಬಳಿಕಿನೊ |
ಳೊರ್ತಕರು ಸಹಿತೈತರಲು ಮನ |
ದರ್ತಿಯೊಳಗುಪಚರಿಸುತಿರೆ ಸ | ನ್ಮಿತ್ರರುಗಳ || 229 ||
ಭೂದಿವಿಜರೈತಂದು ಸಭೆಯ ಸ |
ಮಾಧಿಯಲಿ ಕುಳಿತಿರಲು ಬಳಿಕಿನೊ |
ಳಾದರಿಸಿದರು ತಮತಮಗೆ ಬೇ | ಕಾದವರನು|| 230 ||
ಹೊಡೆವ ವಾದ್ಯದ ರಭಸದೆಡೆಯೊಳು |
ಸಡಗರವನೇನೆಂದು ಜನರಿಗೆ |
ನುಡಿಯುವರೆಯೆಡೆಯಿಲ್ಲದಾಯಿತು | ಗಡಬಡೆಯೊಳು || 231 ||
ಅನಿತರೊಳು ಕನಕಾದ್ರಿಧನಪರು |
ಘನತೆಯೊಳಗೈದಾರು ಮಂದಿಯು |
ದಿನಕರನ ತೆರನಂತೆ ಬರಲಾ | ಕ್ಷಣದಿ ತಿಳಿದು || 232 ||
ಕಾಲಿಗುದಕವನಿತ್ತು ಮನ್ನಿಸಿ |
ತೋಳ್ವಿಡಿದು ಕರೆತರಲು ಸಭೆಯಲಿ |
ಲೀಲೆಯಲಿ ಮಂಡಿಸಿದರಾಕ್ಷಣ | ಸಾಲಿನಿಂದ || 233 ||

ಶರ್ಕರೋದಕವೆಸಗುತವರಿಗೆ |
ತಕ್ಕ ಕೊಡಿಸುತ ಗುಡದ ತೋಯವ |
ಮಿಕ್ಕ ಜನಗಳಿಗಿತ್ತರಾಗಳೆ | ಠಕ್ಕುತನದಿ || 234 ||
ಉಪಚರಣೆಯನು ಮಾಳ್ಪರವರಿಗೆ |
ಸುಫಲ ವಸ್ತುವನೀವರವರಿಗೆ |
ಕಪಟವಿಲ್ಲದೆ ಪಾರಮಾರ್ಥದಿ | ಕೃಪಣರಂತೆ || 235 ||

**ಕೇದಾರಗೌಳ - ಝಂಪೆ**

ಅತ್ತಲಾ ಮದುವಣಿಗನು | ರೌಪ್ಯದಲಿ |
ಕೆತ್ತಿಸಿದ ದಂತವನ್ನು ||
ಅರ್ತಿಯೊಳಗಿರಿಸುತಾಗ | ದಂಡಿಗೆಯ |
ಹತ್ತಿ ಕುಳಿತಿರ್ದ ಬೇಗ || 236 ||
ಮುತ್ತೈದೆಯರು ಕೂಡುತ | ಬೇಗದಲಿ |
ಅರ್ತಿಯೊಳಗನುವಾಗುತ ||
ಮತ್ತೆ ಕನ್ನಡಿ ಕಲಶವ | ಪಿಡಿದು ಪಾ |
ಡುತ್ತಲಿರೆ ಶೋಭಾನವ || 237 ||
ಎದಿರುಗೊಂಡಾಕ್ಷಣದಲಿ | ದಿಬ್ಬಣವ |
ಮುದದಿ ಕರೆತರೆ ತ್ವರೆಯಲಿ ||
ಮದುವಣಿಗ ದಂಡಿಗೆಯನು | ಇಳಿದಾಗ |
ಅಧಿಕ ತೋಷದಿ ಬಂದನು || 238 ||
ಕೂಡಿರ್ಪ ಸಭಿಕರೆಲ್ಲ | ನೋಡಿ ನಗೆ |
ಯಾಡತೊಡಗಿದರು ಸೊಲ್ಲ ||
ಆಡುವರೆ ಅಣಿಗೈದರು | ಇವನ್ಯಾವ |
ಮೂಢನೆನ್ನುತ ಬೈದರು || 239 ||
ಮುಸುಡ ನೋಡಲು ಕೋತಿಯ | ತೆರನಂತೆ |
ಎಸೆಯುತಿಹುದಿವನ ಕಾಯ ||
ನುಸಿದು ಪೋಪುದು ಸದ್ಯದಿ | ನಾವೀಗ |
ಉಸುರಿ ಫಲವೇನ್ ಮಧ್ಯದಿ || 240 ||
ತರಳೆಗೆಣೆಯಾದ ವರನು | ಚಕ್ರವತಿ |
ಪುರದಧಿಪನತಿ ಚಲುವನು ||
ಹರುಷದೊಳು ಕೇಳಲವಗೆ | ಕೊಡದ್ದೀಗೆ |
ಮರುಳುತನ ಹೆಚ್ಚಿತಿವಗೆ || 241 ||
ಈ ಮನುಜನ್ಯಾತಕಿನ್ನು | ವೈವಾಹ |
ಕಾಮಿಸಿದ ಬಗೆಯಿದೇನು ||
ಕಾಮಿನಿಯ ವ್ಯರ್ಥವಾಗಿ | ಇವಗೀವ |
ಪಾಮರನು ಕುಮತಿಯಾಗಿ || 242 ||
ಮತ್ತೋರ್ವನೆಂದನಾಗ | ನಿನಗೆ ಭ್ರಮೆ |
ಹತ್ತಿತೇ ಶಿರದೊಳೀಗ ||
ಅರ್ಥದಾಸೆಗೆ ಕುವರಿಯ | ತಾ ಕೊಡುವ |
ಬಿತ್ತರಿಸಲ್ಯಾತಕಯ್ಯ || 243 ||

**ನಾದನಾಮಕ್ರಿಯೆ - ಅಷ್ಟ**

ಎಂದು ಈ ಪರಿ ಮಾತನಾಡುತ್ತ | ಸಭೆ |
ವೃಂದವೆಲ್ಲವು ನಗೆಯಾಡುತ್ತ ||
ಚಂದದಿ ಕುಳಿತಿರ್ದರಲ್ಲಲ್ಲಿ | ಇತ್ತ |
ಬಂದಿಹ ದಿಬ್ಬಣಿಗರನಿಲ್ಲಿ || 244 ||
ಕುಳ್ಳಿರೆನುತಲಿ ಸತ್ಕರಿಸುತ್ತ | ತೃಷೆ |
ಕೊಳ್ಳಿರೆನುತ ಮತ್ತೆ ನೀಡುತ್ತ ||
ವೀಳ್ಯವನಿಟ್ಟರು ಸಭೆಗಾಗ | ಮತ್ತಾ |
ವ್ಯಾಳ್ಯದಿ ನರ್ತಿಸುತಿರೆ ಬೇಗ || 245 ||
ಬಂದಾಗ ದುಷ್ಟಮತಿಯು ತಾನು | ಸಭೆ |

ವೃಂದಕೆಲ್ಲವ ಕಯ್ಯ ಮುಗಿದನು ||
ಚಂದದೊಳುಪಚರಿಸುತಲಾಗ | ಮತ್ತೆ |
ಮುಂದಾಪ ಕಾರ್ಯಕೆನ್ನುತ ಬೇಗ || 246 ||
ಸತಿಸಹ ತೋಷವ ತಾಳ್ದನು | ತನ್ನ |
ಸುತೆಯನ್ನು ಕರೆತರಲೊರೆದನು ||
ಅತಿ ಜವದಲಿ ಶಾಕಂಬರಿಯಾಗ | ಕಲಾ |
ವತಿಯ ಕಾಣುತಲೆಂದಳತಿಬೇಗ || 247 ||

**ಆನಂದ ಭೈರವಿ - ಆದಿ**

ತಂಗೀ ಕಲಾವತಿಯೇ | ಏನಿದು ಮದ |
ನಾಂಗಿ ನೀ ಶುಭವತಿಯೇ ||
ಮಂಗಲ ಕಾರ್ಯವ | ನಂಗವಿಸುವ ಪಿತ |
ಸಂಗಡ ಕರೆತಾರೆಂ | ದಂಗದೊಳರುಹಿದ || 248 ||
ಚಿಂತಿಸುತಿರ್ಪೆ ಯಾಕೆ | ನಿನ್ನಯ ಮನ |
ದಂತರಂಗದ ಬಯಕೆ ||
ಸಂತಸ ತಾಳುತ | ಲಂತರಿಸದೆ ಪೇಳ |
ಲೆಂತಾ ಪರಿಯ ನಾ | ಗೊಂತುಮಾಡುವೆ ಬಾಲೆ || 249 ||
ನಾಡ ಜನರುಗಳೆಲ್ಲ | ನೆರೆದು ಸಭೆ |
ಗೂಡಿರ್ಪರವರನೆಲ್ಲ ||
ನೋಡುವ ಮನದಿ ಸ | ಗಾಢದಿಂದಲಿ ಜೊತೆ |
ಗೂಡುತ ನೀ ದಯ | ಮಾಡೆ ಮಂಟಪಕೀಗ || 250 ||
ಚಂದದಿ ಪಲ್ಲಂಕಿಯ | ನೇರುತ ಸೊಬ |
ಗಿಂದ ಬಂದಿಹನು ಪ್ರಿಯ ||
ಕುಂದರದನೆ ಸುಮ | ಗಂಧಿನಿ ಚಿಂತೆಯ |
ಹೊಂದದೆ ನಡೆ ನಿನ್ನ | ತಂದೆಯಿದ್ದೆಡೆಗಾಗಿ || 251 ||
ಮರಿದುಂಬಿಗುರುಳೆ ನೀರೆ | ಎನ್ನೊಡನೀಗ |
ಳರುಹಿ ಸಂತಸವದೋರೆ ||
ಹಿರಿಯವಳಲ್ಲವೆ | ತರಳೆಯೆ ನಿನಗೆ ನಾ |
ಪೊರೆದ ತಾಯ್ತಂದೆಯ | ಮರುಗಿಸದಿರು ಬಾಲೇ || 252 ||

**ಟುಮರಿ - ರೂಪಕ**

ಲಾಲಿಸಕ್ಕ ಎನ್ನ ದುಗುಡ ಪೇಳಲನುಚಿತ ||
ಕಾಲನಾದನೆನಗೆ ಪ್ರಿಯದಿ ಪಾಲಿಸಿಹ ಪಿತ || 253 ||
ಎನ್ನ ಪರಿಯನೆಲ್ಲವನ್ನು ನಿನ್ನೊಳರುಹಿದೆ ||
ಭಿನ್ನವಿಡದೆ ಮಾತೆ ಪಿತರ್ಗೆ ಮುನ್ನ ಪೇಳಿದೆ || 254 ||
ಕುನ್ನಿ ಖೂಳಗೆನ್ನ ಧಾರೆಯೆರೆಯೆ ಬಾಳ್ವನೆ ||
ಎನ್ನ ಪರಿಯನರುಹೆ ಪಿತ ತಾನಿನ್ನು ಕೇಳ್ವನೆ || 255 ||
ಯಾರಿಗೆಂಬೆನಕಟ ಎನ್ನ ಭೂರಿ ಶೋಕವ ||
ನೀರಜಾಕ್ಷಿ ದಯದಿ ತೋರಿಸೊಂದು ಮಾರ್ಗವ || 256 ||
ತರುಣಿ ನೀನೆ ನೋಳ್ಪೆಯೆನ್ನ ಪರಿಯನೆಲ್ಲವ ||
ತಿರುಕಗಿತ್ತು ನಿರತವೆನಗೆ ದೊರೆತ ದುಗುಡವ || 257 ||
ಪುಣ್ಯಹೀನರಾಗಿ ಜನಿಸಿ ಪಾಪಿಯುದರದಿ |
ಬನ್ನ ಬಡುವದಾಯಿತೀಗ ನಿರತ ದಿವಸದೀ || 258 ||
ಯಾರಿಗೊರೆಯಬೇಡವೆನ್ನ ದಾರಿ ನೋಡುವೆ |
ಊರ ತ್ಯಜಿಸುತೆಲ್ಲಿಗಾದರೀಗಲೋಡುವೆ || 259 ||
ಎಂದು ಗೋಳಿಡುತ್ತಲಿರಲು ಕುಂದಿ ಮನದಲಿ ||
ಬಂದು ತಾತನೊಡನೆ ನುಡಿದಳೆಂದು ಜವದಲಿ || 260 ||

**ನವರೋಜು - ಏಕ**

ಲಾಲಿಪುದೆನ್ನಯ ಮಾತ | ಸುವಿ |
ಶಾಲ ಸದ್ಗುಣ ತಾತ ||
ಬಾಲೆಯ ಕರೆತರೆ | ಲೀಲೆಯೊಳೈದಲು |
ತಾಳುತ ದುಗುಡವ | ಗೋಳಿಡುತಿರುವಳು || 261 ||
ಕಾರಣವದೇನೆಂದು | ವಿ | ಚಾರಿಸಿ ಕೇಳಿದೆನಿಂದು |
ಕ್ರೂರ ಪಾತಕಿಗೆನ್ನ | ಧಾರೆಯನೆರೆಯಲು |
ಸಾರುವೆನೀಗಲೆ | ಬೇರೊಂದೂರಿಗೆ || 262 ||
ಎಂದೆನುತೀಪರಿ ಸಾರಿ | ತಾ |
ನಂದು ಶೋಕದೊಳೊದರೀ ||
ಹೊಂದಿಹಳಿಳೆಗದರಂದವ ನಿನ್ನೊಳು |
ಕುಂದದೆ ಬೆಸಸಲು ಬಂದಿಹೆನೀಗಲೆ || 263 ||

**ಭಾಮಿನಿ**

ಚಲುವೆ ಶಾಕಂಬರಿಯ ವಚನಗ |
ಳಿಳಿಯೆ ಕುಮತಿಯ ಕರ್ಣದೊಳು ಮಿಗೆ |
ಘಳಿಲನಾಕ್ಷಣ ಸಿಡಿಲೆರಗಿದಂದದಲಿ ಬಸವಳಿದು ||
ಹಲವು ಪರಿಯಲಿ ಚಿಂತಿಸುತ ನಿಜ |
ಲಲನೆ ಸಹಿತೈತಂದು ಧರೆಯೊಳು |
ಮಲಗಿರುವ ಮದನಾಂಗಿಯನು ನುಡಿಸಿದನು ಮಮತೆಯಲಿ || 264 ||

**ನೀಲಾಂಬರಿ - ಆದಿ**

ಮಗುವೆ ನಿನ್ನ ದುಗುಡವೇನು | ಬಗೆಯನೆನ್ನೊಳರುಹೇ ||
ಸೊಗಸ ತೋರ್ಪ ಮನಸಿಗೀಗ | ಸುಗುಣೆ ದಯವದೋರೆ || 265 ||
ಈ ಸೌಭಾಗ್ಯದೊಸಗೆಯೊಳಗಿ | ನ್ನೀಸು ಕ್ಲೇಶವೇನೆ ||
ಭಾಸುರಾಂಗಿ ನುಡಿಯೆನ್ನೊಡನೆ | ಬೇಸರಿಸದೀಗ || 266 ||
ಎದ್ದು ಕುಳಿರೌ ನಿನ್ನ ಮನದ | ಹೊದ್ದಿದಳಲಿದೇನು ||
ಸದ್ದಾಯದೊಳು ಕಣ್ಣ ತೆರೆದು | ಮುದ್ದುಗಿಳಿ ಮಾತಾಡು || 267 ||
ಎಂದು ಸುತೆಯ ಮೊಗದೊಳ್ ಮೊಗವ | ನಂದದಿಂದಲಿಟ್ಟು ||
ಚಂದದಿಂದ ಉಪಚರಿಸಿದ | ನಂದು ಮುತ್ತ ಕೊಟ್ಟು || 268 ||

**ರೇಗುಪ್ತಿ - ಅಷ್ಟ**

ತಾತ ಲಾಲಿಸೈ ಮನದೊಳಾತುಕೊಂಡಿರುವ ವ್ಯಥೆಯ ||
ಪ್ರೀತಿಯೊಳೆಸಗಿದರೆ | ನಾ ತಿಳಿಸುತಿಹೆ ನಿಮಗೆ || 269 ||
ಪೇಳು ಪೇಳೆನ್ನ ಮೋಹದ | ಬಾಲೆಯೇ ನಿನಗೊದಗಿದ |
ಮೇಲಾದ ಕಷ್ಟವನೊರೆಯೆ | ಲೀಲೆಯೊಳುಪಹರಿಸುವೆ || 270 ||
ಚಕ್ರಾಂಕನಗರವಂತೆ | ವಿಕ್ರಮನು ಧರೆಯೊಳಂತೆ ||
ಶಕ್ರನಣುಗನಂತೆ ತೋರ್ಪ | ಚಕ್ರವರ್ತಿಗೆನ್ನನೀಗ || 271 ||
ಧಾರೆಯೆರೆದು ಕೊಡಲು ನಿನ್ನಾ | ಗಾರದೊಳಗಿಹೆನು ಮತ್ತಿ ||
ನ್ನಾರನೊಲ್ಲೆನೆಂದು ಕಣ್ಣ | ನೀರ ಸುರಿಸಿ ಪೇಳ್ವಳಂದು || 272 ||

**ಕೇದಾರಗೌಳ - ಅಷ್ಟ**

ನಂದನೆಯಳ ಮನದಂದವನರಿಯುತ್ತ |
ಲೆಂದ ನಿನ್ನಯ ಮನಕೆ ||
ಹೊಂದುವ ಪುರುಷನ ತಂದು ಲಗ್ನವ ಗೈಯ |
ಲಿಂದಿನ ಸಮಯವಿದು || 273 ||
ಕೂಡಿಹರೈಸೆ ಧನಪರೆಲ್ಲ ಕೆಲಬಲ |
ನಾಡಾಡಿಗಳು ನೆರೆದು ||
ನೋಡಲಿಚ್ಛಿಪರು ಸಗಾಢದಿಂದಲಿ ದಯ |
ಮಾಡೆ ಮಂಟಪಕೀಗಳು || 274 ||

ಧರಣಿ ತಾ ಮುಳುಗಲಿ ಶರಧಿಗಳೊಣಗಲಿ |
ಹರಿ ಹರಾದಿಗಳೊರೆಯೆ ||
ಸರುವಥಾ ನಾನೀಗ ದುರುಳ ಬಾಹಿರನಿಗೆ |
ಅರಸಿಯಾಗೆನು ದಿಟವು || 275 ||
ಇಂದು ಈ ಪರಿಯ ನಿರ್ಬಂಧಿಸಿದರೆ ಪ್ರಾಣ |
ಹೊಂದಿಸುವೆನು ಮಗುಳೆ ||
ಅಂದವಾಗಲಿ ಮನಕೆಂದು ಕಣ್ಣೀರನು |
ತಂದು ಗೋಳಿಡುತಿರಲು || 276 ||

**ವಾರ್ಧಕ**

ನಾನೇನನುಸುರಿದರು ಪಿಡಿದ ಛಲ ಬಿಡಲೊಲ್ಲ |
ಮಾನವಂತರು ಸಭೆಯ ಮಾಡಿ ನೆರೆದಿಹರಲ್ಲ |
ಕಾನನವ ಸಂಚರಿಪ ಚಂದ್ರಚೂಡನ ಮನದಿ ನೀನಿನ್ನು ಯೋಚಿಸದಿರು ||
ಪ್ರಾಣನಾಯಕನಾಪ ವ್ಯಣಪಾಲನೆಂಬವನು |
ತಾನೆ ನೆಲಸಿಹನೀಗ ಮಂಟಪಕೆ ಬಾರೆಂದು |
ಏನ ಪೇಳ್ವರು ಬಾರದಿರಲೆತ್ತಿಕೊಂಡಾಗ ಸಭೆಯೊಳಗೆ ನಡೆತಂದನು || 277 ||

**ಭಾಮಿನಿ**

ಈ ತೆರದ ಛಲದಿಂದ ಕುವರಿಯ |
ನಾ ತತುಕ್ಷಣವೆತ್ತಿಕೊಂಡತಿ |
ಪ್ರೀತಿಯೊಳಗೈತರಲು ಕಾಣುತ ಸಭೆಯ ಕೆಲಬಲದಿ ||
ಭೂತಳದೊಳೀಭೂಪಗೆಣೆಯಹ |
ಪಾತಕಿಗಳಾರಿಹರೆನುತ ಸಖಿ |
ವ್ರಾತ ಕೂಡುತಲಾಗ ತಮ್ಮೊಳು ಮಾತನಾಡಿದರು || 278 ||

**ಸಾವೇರಿ - ಆದಿ**

ನೋಡವ್ವ ಇಂಥ ಬಾಲೆಯ | ಹಾಳು ಬಾವಿಗೆ |
ದೂಡುವನಲ್ಲ ನಿಶ್ಚಯ ||
ಮೂಢತನವ ಗೈದನು | ಈ ದುಷ್ಟಮತಿಯು |
ಕೇಡಗೈವನು ಸುತೆಗಿನ್ನು || 279 ||
ಚಂದ್ರಶೇಖರನೆಂಬಗೆ | ಆದಿಯೊಳೀವೆ |
ನೆಂದುಸುರುತಲಿ ಮ್ಯಾಗೆ ||
ಮಂದಮತಿಯ ತಾಳಿದ | ವ್ಯಣಪಾಲನಿಂಗೆ |
ಸಂಧಿಸುವನು ನೋಡಿದ || 280 ||
ಎಷ್ಟು ತಾನೊಲ್ಲೆನೆಂದರು | ಆ ಕುನ್ನಿಗೆ |
ಕಟ್ಟುವ ಬಗೆ ಮಾಳ್ಪರು ||
ನಷ್ಟಗೈವಳು ತನುವನು | ನಾನೆಂದ ನುಡಿ |
ಕಟ್ಟಿಕೊ ಸೆರಗಲಿನ್ನು || 281 ||
ಸುದತಿ ಸಂಕುಲಕೆ ಸಾಕು | ಕುಮತಿಯು ಗೈದ |
ಮದುವೆಯ ಕಾರ್ಯ ಠೀಕು ||
ಒದರುವದ್ಯಾತಕೀಗ | ಅರ್ಥದಾಸೆಗೆ |
ಚದುರೆಯ ಕೊಲುವನೀಗ || 282 ||

**ಆನಂದಭೈರವಿ - ಏಕ**

ಈ ತೆರದಿಂದಲಿ ಸಖಿ |
ವ್ರಾತವು ತಮ್ಮೊಳ್ ಮಾತ | ನಾಡುತ್ತ | ಚಿಂತೆ | ತಾಳುತ್ತ || 283 ||
ಯಾತಕೀ ಪಾಪಿಯುದರದಿ |
ಭೂತಳದೊಳೊಗೆದು ಬೆಳೆದೆ | ಯೇ ನೀರೆ | ಮುದ್ದು | ಮೊಗದೋರೇ || 284 ||
ಭೂತ ಪೈಶಾಚನಂತಿರ್ಪ |
ಪ್ರೀತನ ಕೈವಿಡಿಯೆ ಧರೆಯು | ಹೊರುವಳೇ | ಬಾಳಿ | ಯಿರುವಳೇ || 285 ||

**ಸೌರಾಷ್ಟ್ರ - ತ್ರಿವುಡೆ**

ಎಂದು ಬಹುಪರಿ ಗಜಬಜಿಸುತಿರ |
ಲಂದು ಕುಮತಿಯು ಚಿಂತಿಸುತಲೈ |
ತಂದ ಮಂಟಪಕಾಗಿ ಸುತೆಸಹಿ | ತಂದು ಜವದಿ || 286 ||
ಭೂಸುರರ ಮತದಿಂದ ಮನದಭಿ |
ಲಾಷೆಯನು ಪೂರ್ತಿಸುವೆನೆನುತಲಿ |
ಲೇಸೆನಿಪ ಮಾಲಿಕೆಯನಿತ್ತನು | ತೋಷದಿಂದ || 287 ||
ತರುಣಿ ಕೇಳೀ ಪುಷ್ಪಮಾಲೆಯ |
ನಿರಿಸು ಪ್ರೀತನ ಕೊರಳಿಗೆಂದೆನೆ |
ಶಿರವ ನೆಗಹದೆ ಸುಮ್ಮನಿರ್ದಳು | ಕೊರತೆಯಿಂದ || 288 ||
ಈಸು ಛಲ ನಿನಗೇತಕೆಂದನು |
ತಾ ಕುಸುಮಮಾಲಿಕೆಯನಾತಗೆ |
ಬೇಸರಿಸಿ ಲೆಕ್ಕಿಸಿದನವನಾ | ಯಾಸದಿಂದ || 289 ||
ಮೋದಭಾವವ ತಾಳಿದವನಂ |
ತಾದರಿಸುತಲಿ ಜನರನೆಲ್ಲರ |
ಸಾಧಿಸಿತು ಕೈಕೊಂಡ ಕಾರ್ಯಗ | ಳೀ ದಿವಸದಿ || 290 ||
ಎಂದು ಯೋಚಿಸಿ ತನ್ನ ಮನದಲಿ |
ಮುಂದೆ ಬರುವಂತೇಸುಕಷ್ಟವ |
ನಂದಿವಾಹನನಣುಗನರಿಯುವ | ನೆಂದನಾಗ || 291 ||

**ಭಾಮಿನಿ**

ಇಂತು ವಿಭವದಿ ಶುಭ ಮುಹೂರ್ತದಿ |
ಸಂತಸವ ತಾಳುತ್ತ ಸುತೆಯನು |
ಕಾಂತೆಸಹ ವೃಣಪಾಲನಿಗೆ ತಾನೆರೆದು ಧಾರೆಯನು ||
ಮುಂತೆ ಸಭೆಯೊಳಗಿರ್ದ ಧನಪರ |
ನಾಂತು ಮನ್ನಿಸಿ ತೋಷಪಡಿಸುತ |
ಕುಂತು ಸ್ಥಿತಿಗತಿ ಮಾತನಾಡುತಲಿರ್ದನವರೊಡನೇ || 292 ||

**ಸುರುಟಿ - ಏಕ**

ದಕ್ಷಿಣೆಗಳನಾಗ | ಕೊಡಿಸಲು |
ಈಕ್ಷಿಸಿ ಜನ ಬೇಗ ||
ಲೆಕ್ಕಿಸುತಿತ್ತಿಹ ಹಣಕಾಸುಗಳನು |
ತಕ್ಷಣ ನಡೆದರು ತಮ್ಮಮ್ಮಿಳಯಕೆ || 293 ||
ಭೂರಿ ಜನಗಳಾಗ | ತೆರಳಲು |
ಸೂರ್ಯೋದಯ ಬೇಗ ||
ತೋರಲು ಪ್ರಸ್ತಕೆ ಸಕಲನುಕೂಲವ |
ಪ್ರೇರಿಸಿದಂದದೊಳೊದಗಿನೊಳಿತ್ತರು || 294 ||
ಸಾನುರಾಗದೊಳಗ | ಸರ್ವರ |
ಮಾನಿಸುತಿರೆ ಬೇಗ ||
ನಾನಾ ಪರಿಗಳ ತಿಂಡಿಯನೆಸಗುತ |
ಮಾಣಿಸಿದರು ಕ್ಷುದ್ಬಾಧೆಯನಾಕ್ಷಣ || 295 ||
ಅಡಿಗೆಯ ಮಂದಿರದಿ | ಜನಗಳ |
ಗಡಬಡೆಗಳು ಜವದಿ ||
ತೊಡಗಿತು ಪಾಕದ ರಭಸಕೆ ಅಗ್ನಿಯ |
ಅಡಿ ಮೇಲ್ಮಾಡುತ ಕಡು ಜಾಗ್ರತೆಯೊಳು || 296 ||

**ವಾರ್ಧಕ**

ಹಲಸು ಕುಂಬಳು ಬದನೆ ತೊಂಡೆ ಬೆಂಡೆಯು ಚೌಳಿ |
ಚಲುವಾದ ಮರಸಣಿಗೆ ಗೆಣಸು ಹಾಗಲು ಹೀರೆ |
ನಲವಿಂದ ಪಲ್ಯ ಗೈದರು ಬೇಳೆಸಾರು ಹುಳಿ ಶಾಖವಾದುದು ಸೌತೆಯ ||
ನಿಲದೆ ಮುದ್ದುಳಿ ಕಡಬು ಚಿತ್ರಾನ್ನ ತೊವೆ ಪಳದ್ಯ |
ಕಲಸು ಪಾಯಸ ಗೊಜ್ಜು ಸಾಸುವೆ ಕುಸುಂಬ್ರಿಗಳು |
ಜಿಲಿಬಿಯಣ್ಣೋರಿಗೆಯು ಬಗೆಬಗೆಯನೆಸಗಿದರು ಸೊಗಸಾಗಿ ತಕ್ಷಣದಲಿ || 297 ||

**ಸಾಂಗತ್ಯ - ರೂಪಕ**

ಬಂಧುವರ್ಗವು ಮಿತ್ರಮಂಡಲಿಗಳು ಸಹಿ |
ತಂದು ಪಂಕ್ತಿಯಲಿ ಮಂಡಿಸಲು ||
ಒಂದೊಂದಾಗಿಯೆ ಬಡಿಸಲು ತೊಡಗಿದರಾಗ |
ಚಂದದೊಳೀರೇಳು ಜನರು || 298 ||
ಶಾಕಪಾಕಾದಿಗಳದನುಂಡ ಮೇಲಾಗ |
ಸಾಕಾರವಾದ ಕಜ್ಜಾಯ ||
ಬೇಕೆಂಬವರಿಗೆಲ್ಲ ಬಡಿಸಲು ಸಕಲರು |
ಜೋಕೆಯೊಳದ ಪೂರೈಸಿದರು || 299 ||
ಕಡುಬು ಪಾಯಸವನ್ನು ಎಡೆತಪ್ಪದಿಕ್ಕಲು |
ನುಡಿ ಮಾತ್ರದಲಿ ತೀರಲಾಗ ||
ಒಡನೆ ಮೊಸರು ಮಜ್ಜಿಗೆಯನೆಲ್ಲ ಬಡಿಸಲು |
ಬಿಡದೆದ್ದು ತೊಳೆಯೆ ಕೈಗಳನು || 300 ||
ಆ ತತುಕ್ಷಣ ವೀಳ್ಯಮಂತ್ರಾಕ್ಷತೆಯನೆಲ್ಲ |
ವಾತುರದಿಂದ ಪೂರೈಸಿ ||
ಭೂತ ಪಾಂಡ್ಯಾದಿಗಳಿಂಗೆಲ್ಲ ಬಡಿಸಲು |
ಪ್ರೀತಿಯೊಳುಂಡು ತೇಗಿದರು || 301 ||

**ಸೌರಾಷ್ಟ್ರ - ತ್ರಿವುಡೆ**

ಇಂತು ವಿಭವದಿ ಪ್ರಸ್ಥ ಕಾರ್ಯವ |
ಸಂತಸದಿ ಪೂರೈಸಲಾ ತದ |
ನಂತರದಿ ಮದುವಣಿಗನಿಗೆ ವಿಧಿ | ಬಂತು ಕೇಳ್ಕೆ || 302 ||
ಮೂರು ದಿವಸದ ಬಾಂಧಿಕವು ಕೈ|
ಸೇರೆ ವ್ರಣಪಾಲನಿಗೆ ಮನದೊಳು |
ಭೂರಿ ಯೋಚನೆಗೊಳುತಲೆಂದನು | ಕ್ರೂರಮತಿಯು || 303 ||
ಲೇಸುಕಾರ್ಯದೊಳೀಗ ಮನುಕು |
ಲ್ಲಾಸ ತೋರದ ಪರಿಯದೇನೆನು |
ತಾ ಸಮಯದಲಿ ಕೇಳ್ದನೆಡಬಲ | ಭೂಸುರರನು || 304 ||

**ನಾದನಾಮಕ್ರಿಯೆ - ಏಕ**

ಪ್ರೀತಿಯಿಂದ ಲಾಲಿಸಯ್ಯ | ಕುಮತಿರಾಯ | ಒಳ್ಳೆ |
ನೂತನದ ಕಾರ್ಯವಿಂದು | ಕುಮತಿರಾಯ || 305 ||
ಚಿತ್ತವ ಚಂಚಲಿಸದಿರು | ಕುಮತಿರಾಯ | ದೋಷ |
ಹರಿದು ಪೋಪುದಯ್ಯ ಸಿದ್ಧ | ಕುಮತಿರಾಯ || 306 ||

**ಸಾಂಗತ್ಯ - ರೂಪಕ**

ಎಂದು ಭೂಸುರರೆಲ್ಲ ವೊಂದಾಗಿ ನಡೆತಂದು |
ಚಂದದಿ ಸ್ನಾನ ವಿರಚಿಸಿ ||
ಬಂದು ಪೇಳ್ದರು ದಾನವೃಂದವ ಕೊಡಿಸೆನು |
ತಂದುಸುರಿದರು ಮತ್ತವಗೆ || 307 ||

ಭೂದಾನವನು ಮಗ ಮಾಧವೈತಾಳಗೆ |
ಗೋಧಿಯ ಸುಬ್ಬಾಭಟ್ಟರಿಗೆ ||
ಗೋದಾನವನು ನಮ್ಮಸೋದರಳಿಯನಿಗೆ |
ಮೋದದೊಳೀಯುವದೀಗ || 308 ||
ಸಿದ್ದಿ ಜೋಯಿಸರಿಗೆ ಉದ್ದು ಬೆಲ್ಲವ ನೀಡಿ |
ಹೊದ್ದಿರ್ಪ ಸೋಮಯಾಜರಿಗೆ ||
ಬದ್ದವಿಸಲಿ ರೌಪ್ಯವವನನುಜಗೆ ತಿಲ |
ಸದ್ದಿಲ್ಲದಂತೆ ನೀಡುವುದು || 309 ||
ಬಂಗಾರವೆಮ್ಮಯ ಲಿಂಗಣ್ಣಪಾದ್ಯಗೆ |
ರಂಗಭಟ್ಟನಿಗೆ ಧಾನ್ಯವನು ||
ಗಂಗಾಧರಡಿಗಗೆ ತೆಂಗಿನ ಫಲದಾನ |
ಕಂಗೊಳಿಸಲು ಬೇಕು ಜವದಿ || 310 ||
ದುಗ್ಗಜೋಯಿಸರಿಗೆ ಮುಗ್ಗಿದ ತುಪ್ಪವು |
ಕಗ್ಗುಂಬಳವನಪಾರ್ತರಿಗೆ ||
ಕಿಗ್ಗದಾಚಾರ್ಯಗೆ ಹುಗ್ಗಿಯ ನೀಡಿರಿ |
ಅಗ್ಗದೊಸ್ತ್ರವನೈತಾಳರಿಗೆ || 311 ||
ಪಟ್ಟೆಯ ದಾನವಿಲ್ಲಿಟ್ಟಿರಿಯೆನಗೀಗ |
ಘಟ್ಟದಿಂದಿಳಿದ ಭೂಸುರಗೆ ||
ಕೊಟ್ಟು ಕಳುಹಿಸಿ ತ್ರಿಶೂಲ ತೈಲವನೆಂದು |
ಅಟ್ಟಹಾಸದೊಳುಸುರಿದರು || 312 ||

**ಸೌರಾಷ್ಟ್ರ - ತ್ರಿವುಡೆ**

ಭೂತಳಮರರ ನುಡಿಯ ಕೇಳುತ |
ಖಾತಿಗೊಳುತಿಂತೆಂದ ನಿಮ್ಮಯ |
ರೀತಿಯರಿತಿಹೆನೈಸೆ ಪರಧನ | ಪ್ರೀತರೆಂದು || 313 ||
ಪಂಚದಿನದುಪಚಾರವಾಪುದ |
ಕಂಚಿಕೆಯ ನಾ ಕಾಣೆನೆನುತಲಿ |
ಮುಂಚೆಯುಸುರಿದರೀಗ ದಾನವ | ಹಂಚಿಸಿದಿರಿ || 314 ||
ಕೊಂಬುದಲ್ಲದೆ ಪರರಿಗೀಯುವ |
ಹಂಬಲವ ನಾನರಿಯೆನೈ ಸೌ |
ರಂಭವಾದುದು ನಡಿರಿ ಭವನಕೆ | ಮುಂಬರಿಯದೆ || 315 ||
ಕೊಟ್ಟ ಹಣದೊಳಗರ್ಧವಾದರು |
ಕಟ್ಟಿಡುವೆನೆಂದೆಂಬ ಯೋಚನೆ |
ಗೊಟ್ಟ ಕೆಲಸಕೆ ಭಂಗವಾದುದು | ಕೆಟ್ಟೆನೆನುತ || 316 ||
ಯಾಕೆ ಬಂದಿಹ ಬಂಧುಗಳು ಮನೆ |
ಗೇಕೆ ತೆರಳುವುದಿಲ್ಲವೆನ್ನುವ |
ವ್ಯಾಕುಲವ ತಾಳುತ್ತ ಕಳೆದನು | ನಾಕು ದಿವಸ || 317 ||

**ಭಾಮಿನಿ**

ಮದುವೆ ಕೆಲಸವು ಪೂರ್ತಿಯಾಗಲು |
ಮೊದಲು ಬಂದಿಹ ನೆಂಟರೆಲ್ಲರು |
ಸದನಕತ್ತಲು ತೆರಳಿದರು ಸತಿಪುತ್ರರೊಡಗೂಡಿ ||
ಮುದವ ತಾಳುತ ಧನಪರೆಲ್ಲರು |
ಮದವತಿಗೆ ಹಣಕಾಸು ಮಿಸ್ರಿಯ |
ನೊದಗಿನಿಂದೀಯುತ್ತ ಉಪಚರಿಸುತಲಿ ತೆರಳಿದರು || 318 ||

**ಕಾಂಬೋಧಿ - ಝಂಪೆ**

ಇಂತು ಶುಭ ಕಾರ್ಯವನು ಸಂತಸದಿ ಪೂರೈಸ |
ಲಂತ್ಯದೊಳು ಧನಮಿಲ್ಲದಿರಲು ||
ಸಂತಾಪವನು ತಾಳಿ ಕುಂತಪುರಪತಿಯಹ ವ |
ಸಂತರೊಳು ಕುಮತಿಯುಸುರಿದನು || 319 ||

ಕೇಳಿದಿರೆ ನೀವೆಲ್ಲ ಆಪ್ತರಾದವರುಗಳು |
ಪೇಳಿದರೆ ಅಲ್ಪವೆನ್ನುವರು ||
ಬಾಲೆಯರು ಜನಿಸುವುದು ಪ್ರಾರಬ್ಧ ಫಲದಿಂದ |
ಏಳು ಜನ್ಮಾಂತರಕು ಬೇಡ || 320 ||
ಕುಸುಮಗಂಧಿನಿಗಾಗಿ ಯಸದ ಶುಭಕಾರ್ಯದಲಿ |
ಬೆಸಸಿದರೆ ಬಂಧುಮಿತ್ರರಿಗೆ ||
ಕುಶಲದೊಳಗೈತಂದು ಹಸನದೊಳಗಿದ್ದೆನ್ನ |
ವ್ಯಸನಕೀಡಿಟ್ಟರಕಟಕಟಾ || 321 ||
ನಗೆಯಾಡುತುಂಡಮನೆಗೆರಡೆಂಟನೆಣಿಸುವರು |
ಹಗೆತನದಿ ನಮ್ಮವರೆ ಕೆಲರು ||
ಬಗೆಬಗೆಯ ಬೋಧಿಸಿ ಕಲಾವತಿಯ ಮನವನುರೆ |
ತೆಗೆಬಗೆಯ ಮಾಡಿದರು ಬಿಡದೆ || 322 ||
ಧನಪತಿಗಳಲ್ಲದಿರೆ ಘನತೆಯಪ್ಪುದೆ ಕಾರ್ಯ |
ವೆನಲಿಕೇನಿಹುದು ಫಲವೀಗ ||
ಬಿನುಗು ಜನರಭಿಮತವನನುಕರಿಸುತಿಹ ನಿಮ್ಮ |
ತನಯನಹ ಗ್ರಾಮಾಧಿಪತಿಯು || 323 ||
ಏನನುಸುರುವೆನು ಐದಾರು ಮನೆಯವರೆಲ್ಲ |
ಜಾಣತನದಿಂದಲೊಂದಾಗಿ ||
ಮಾನಹಾನಿಯನೆಸಗಬೇಕೆಂದು ಬಲು ಬಗೆ ನ |
ವೀನ ಕಾರ್ಯವ ಗೈದರಂತೆ || 324 ||
ಎಂದುಸುರುತಲಿ ಕೋಪದಿಂದೆದ್ದು ಧನಪರಿಗೆ |
ಒಂದುಳಿಯದೆಲ್ಲವನ್ನರುಹಿ ||
ಬಂಧುಗಳ ಮಾನ ಕಳೆಗುಂದಿಸುವೆನೆನುತಲೈ |
ತಂದ ಕನಕಾದ್ರಿಯೆಡೆಗಾಗಿ || 325 ||

**ಕೇದಾರಗೌಳ - ಝಂಪೆ**

ಇತ್ತ ಬರೆ ಕುಮತಿಯಾಗ | ಇವನ ಮಗ |
ಬಿತ್ತರಿಪೆನೆನುತ ಬೇಗ ||
ಅತ್ಯಧಿಕ ರೋಷದಿಂದ | ತತ್ಪೂರ್ವ |
ಪತ್ನಿಯಳ ಗೃಹಕೆ ಬಂದ || 326 ||
ಕೇಳಿದಿರೆ ನೀವಿದೆಲ್ಲ | ನಮ್ಮನೆಯ |
ಮೂಲಸಂಗತಿಯ ಸೊಲ್ಲ ||
ನೀಲವೇಣಿಯ ಕಾರ್ಯದಿ | ಆದ ಪರಿ |
ಪೇಳಲೇನದನಂತ್ಯದಿ || 327 ||
ಕುಶಲಮತಿಯೊಡಗೂಡುತ | ಚಕ್ರಾಂಕ |
ವಸುಧೆಪಾಲಕನ ಮತ್ತ ||
ಶಶಿಮುಖಿಯನೀವೆನೆನುತ |
ನಮ್ಮೆಡೆಗೆ ಹಸನದಿಂ ತಾನು ಬರುತ || 328 ||
ಎನ್ನ ಭಗಿನಿಗನೀತಿಯ | ತಾನೊರೆಯು |
ತಿನ್ನು ಕೆಡಿಸುವ ನಿಶ್ಚಯ ||
ಮುನ್ನ ನೀತಿಯನಳಿಸುವೆ | ಮಿತ್ರನಿಂ |
ಗಿನ್ನು ತೋಷವಗೊಳಿಸುವೆ || 329 ||
ಈ ತೆರದ ಪಂಥವಾಡಿ | ಪೋದ ಗಡ |
ಪಾತಕದ ಕಾರ್ಯಗೂಡಿ ||
ತಾತನಂದದಿ ಸುತರಿಗೆ | ಮತಿಬರುವ |
ರೀತಿಯುಸುರ್ವರು ಮಾತಿಗೆ || 330 ||
ಅಕ್ಕನಾಗಿರುವಳೆನ್ನ | ಗೃಹದೊಳಿಹ |
ಚಿಕ್ಕಮತಿಯೆಂಬಳನ್ನ ||
ಅಕ್ಕರದೊಳಿವನ ಪಿತನು | ಬಲಿಯನ್ನ |
ಮುಕ್ಕಿಸಿದ ಬಗೆಯರಿತೆನು || 331 ||

ಎಮ್ಮ ಗೃಹದೊಳಗೊಗೆದಿಹ | ಸ್ತ್ರೀಯರಿಗೆ |
ತಮ್ಮದಧಿಕಾರವೆನುವ ||
ದುರ್ಮತಿಯ ಕಾರ್ಯವೆಸಗೆ | ನಾವರಿತು |
ಸುಮ್ಮನಿರುತಿಹೆವೆ ಹೀಗೆ || 332 ||

**ಸೌರಾಷ್ಟ್ರ - ತ್ರಿವುಡೆ**

ಮಿತ್ರ ಭಾವವ ಬಿಡದಿರಲು ತ |
ತ್ಪುತ್ರಿಯಳನೀಯುವುದೆ ವಿಹಿತವು |
ಧೂರ್ತತನವನು ಗೈಯುತನ್ಯರ | ಪುತ್ರಿಯರನು || 333 ||
ಬೇರೆ ಮಾನವಗೀವೆನೆಂಬೀ |
ಧೋರಣೆಯ ಮಾತುಗಳಿದೇತಕೆ |
ಭಾರಿ ಮನವಿರಲೊಡನೆ ಜನಿಸಿಹ | ನಾರಿಯಳನು || 334 ||
ಸೋಮಶೇಖರಗಿತ್ತು ಲಗ್ನವ |
ಪ್ರೇಮದಲಿ ರಚಿಸಿದರೆ ಕೀರ್ತಿಯು |
ಭೂಮಿಯೊಳಗನವರತ ನೆಲಸಿಹ | ದೀ ಮಹಿಮನಾ || 335 ||
ಎನ್ನ ಪತ್ನಿಯ ಗೃಹವಿದೆಂಬುವ |
ದೆನ್ನ ಮನದೊಳಗಿಲ್ಲ ಭೋಜನ |
ವನ್ನು ಮಾಡೆನು ಇವರ ತಳ್ಳಿಯ | ದಿನ್ನು ಬೇಡ || 336 ||
ಎಂದು ಬಾಯಿಗೆ ಬಂದ ಪರಿಯಲಿ |
ಹಿಂದುಮುಂದನು ಯೋಚಿಸದೆ ನಡೆ |
ತಂದನಾಲಯಕಾಗಿ ಬಯ್ಯುತ | ಬಂಧುಗಳನು || 337 ||

**ಕೇದಾರಗೌಳ - ಅಷ್ಟ**

ಬರುಬರುತಲಿ ಕುಮತಿಯು ತನ್ನ ಮನದಲಿ |
ಪರಿ ಪರಿ ಯೋಚಿಸುತ ||
ತರಳೆಯ ಮದುವೆಯ ನೆವದಲಿ ಹಣಗಳ |
ನಿರಿಸಲೆಣಿಸೆ ಮನದಿ || 338 ||
ನೆರೆಹೊರೆ ಜನರು ನಂಟರುಗಳು ಸಹ ಬಂದು |
ಹರುಷದೊಳುರಿದು ತನ್ನ ||
ನಿರತ ಶೋಕಕೆ ಗುರಿಗೈದಿಹರೆನ್ನುವ |
ಕೊರತೆಯ ತಾಳಿದನು || 339 ||
ನಾನೊಂದನೆಣಿಸಲು ದೈವವೊಂದೆಣಿಸಿತು |
ಪ್ರಾಣ ತೊರೆವೆನೆಂದರೆ ||
ಮಾನಕಂಜುವದಾಯಿತೆನುತಲಿ ನಡೆತಂದ |
ಕಾಣದೆ ದಾರಿಯನು || 340 ||
ಧನಪತಿಗಳು ಸಭೆಯೊಳಗೆ ಕುಳ್ಳಿರಲಾಗ |
ವಿನಯದಿ ಶಿರವ ಬಾಗಿ ||
ಘನವಾದ ನುಡಿಯಿಂದ ಮನ ಮೆಚ್ಚಿಸುವೆನೆಂದು |
ಸನುಮತದೊಳಗೆಂದನು || 341 ||

**ಕಾಂಬೋಧಿ - ಝಂಪೆ**

ಕೇಳಿದಿರೆ ಮಹಸ್ವಾಮಿ ಕಾರ್ಯವೊಂದೆಣಿಸುವರೆ |
ಕಾಲ್ವಿಡಿಯ ಬೇಕೆಲ್ಲರಿಂಗೆ ||
ಖೂಳತನವನು ಗೈದು ಹಾಳುಮಾಡಲಿಕೀಗ |
ಬಾಲನಾದರು ಸಾಕು ಜಗಕೆ || 342 ||
ಜ್ಞಾನವಂತನು ತಾನೆನಿಸುವ ಗ್ರಾಮಾಧಿಪತಿ |
ದೀನಪಾಲನು ಸೇರಿ ಮಗನ ||
ಮಾನಿನಿಯ ಸೋದರರು ಸಹಿತಲೊಂಚಿಸುತೆನ್ನ |
ಮಾನವನು ಕಳೆಯಲೆಣಿಸಿಹರು || 343 ||

ಭ್ರಷ್ಟನಾಗಿಹ ಕುಶಲಮತಿಯೆನ್ನ ಉದರದೊಳು |
ಪುಟ್ಟಿರುವ ಸುಕುಮಾರಿಯಳನು ||
ತಟ್ಟನೀಯದಿರೆ ಶಿರ ಕುಟ್ಟಿಸುತಲೊಯ್ವೆನೆನು |
ತಟ್ಟಹಾಸದೊಳೆಂದನಂತೆ || 344 ||
ಪರಿಣಯದ ನೆವನದೊಳಗೈತಂದು ನಮ್ಮನೆಗೆ |
ಕರವಿಡಿದು ಕುಳ್ಳಿರಿಸಿ ಮಗಳ ||
ಪರಿಪರಿಯ ಬೋಧಿಸುತ ಬೆರಳಿನುಂಗುರವಿತ್ತು |
ಭರವಸವ ತಾನಿತ್ತನಂತೆ || 345 ||
ಅವನ ಮಾತುಳನೊರ್ವನಿಹನು ತಂತ್ರದೊಳೀಗ |
ಭುವಿಯೊಳಗೆ ಕಾಣೆನನ್ಯರನು ||
ಕುವರಿಗುಪದೇಶವೆಸಗಲು ಬಾರದವ ತನ್ನ |
ಯುವತಿಯೊಡನರುಹಿ ಕಳುಹಿಸಿದ || 346 ||
ಆದುದಾಗಲಿ ಮುಂದೆ ಕಾಲ ಬಂದೊದಗುವದು |
ಸಾಧಿಸುವೆ ನಾ ಸಮಯವೆನುತ ||
ಭೇದದೊಳಗುಸುರುತಲಿ ತಾ ಮುದದಿ ಯೋಚಿಸಿದ |
ಹಾದಿಯೊಳು ಲಾಭದಾಸೆಯೊಳು || 347 ||
ದುಡ್ಡು ಹಣಕಾಸುಗಳನೆಳಕೊಂಡು ಬೇರೊಬ್ಬ |
ದಡ್ಡಗಾದರು ಸುತೆಯನಿತ್ತು ||
ಅಡ್ಡಿಯಿಲ್ಲದೆ ವಿವಾಹಮಹೋತ್ಸವವನೆಸಗಿದೆನು |
ದೊಡ್ಡವರೆ ನಿಮ್ಮ ಕೃಪೆಯಿಂದ || 348 ||
ಎಂದು ಈ ಪರಿ ಬಾಯ್ಗೆ ಬಂದಂತೆ ಗಳಹುತಲಿ |
ಅಂದವರ ಮನವನೊಲಿಸುತಲಿ ||
ಮಂದಿರಕೆ ತೆರಳಿದನುಯೆಂದೆಂಬ ಕಥೆಯಿದನು |
ಚಂದದೊಳಗೆಲ್ಲರರಿಯುವುದು || 349 ||
ರಸೆಯೊಳಗೆ ಲೋಭಗಾರರಿಗೀತ ಗುರುವೆಂದು |
ಪಸರಿಸುವದೀ ನಡೆದ ಕಥೆಯ ||
ಕುಶಲತರ ವೀಕ್ಷಿಸಲು ವಸುಧೆಬಾಧಕರಾಗು |
ತೆಸದರೇನಿಹುದೈಸೆ ಫಲವು || 350 ||

**ಕೇದಾರಗೌಳ - ಅಷ್ಟ**

ಇಂತೀಪರಿಯ ದುಷ್ಟಬುದ್ಧಿಯ ಚರಿತೆಯ |
ಸಂತಸದಲಿ ಪದ್ಯದಿ ||
ಕಂತುಪಿತನ ದಯೆಯಿಂದ ರಚಿಸಿದೆನು |
ಮುಂತೆಲ್ಲರರಿಯುವಂತೆ || 351 ||
ನೋಡಿ ತಪ್ಪಿರೆ ಸರಿಗೈದು ಪೇಳುವಿರೆಂದು |
ಬೇಡುವೆನೆಲ್ಲರಿಗೆ ||
ರೂಢಿಯೊಳಿದನೆಲ್ಲ ಮೆರೆಸಬೇಕೆನುತಲಿ |
ಮಾಡುವೆ ನಮನವನು || 352 ||
ವರುಷದುಂದುಭಿಯ ಶ್ರಾವಣದ ಶುಕ್ಲದ ಷಷ್ಠಿ |
ಸ್ಥಿರವಾರದೊಳಗಿದನು ||
ಹರುಷದಿ ಪೂರ್ಣಗೈದೆನು ವಿಧಿಯರಸಿಯ |
ಚರಣದ ಕರುಣದಿಂದ || 353 ||
ಮಂಗಲ ಕರಿಮುಖನಂಘ್ರಿಗೆ ಜಯ ಜಯ |
ಮಂಗಲ ಶಾರದೆಗೆ ||
ಮಂಗಲ ನಾರಸಿಂಹನಿಗೆ ಮಂಗಲ ಜಯ |
ಮಂಗಲ ಜಯಜಯತು || 354 ||

**ವಾರ್ಧಕ**
ವಾರಿನಿಧಿಯಾತ್ಮಜೆಯ ಪೆಸರಾದಿಯುಳಿದ ಪರ |
ಮೂರು ಮಾತ್ರೆಗೆ ಗೇಹವೆನಿಪಿನಿತು ರಂಜಿಸುವ |
ಚಾರು ಚತುರಾಕ್ಷರದ ನಾಮದೊಳಗೊಗೆದು ವರ ಧಾರುಣೀಸುರರ ಕುಲದಿ ||
ವಾರಾಹಿತಟಿನಿಯೊಳು ಕ್ಷೀರಪುರದೊಳಗೆಸೆವ |
ನಾರಸಿಂಹನ ದಯದಿ ನಾರಿಸುತರೊಡಗೂಡಿ |
ಪ್ರಾರಬ್ಧಫಲದಿಂದ ದಾರಿದ್ರ್ಯತನವನುರೆ ಸೇರಿ ಜೀವಿಸುತಿರ್ಪೆನು || 355 ||

*****ಶುಭಂ*****

# ಕೃತಜ್ಞತೆಗಳು


**ಅಂತರಜಾಲ ಪ್ರಕಾಶನ ಪ್ರಾಯೋಜಕರು:** ಕರ್ನಾಟಕ ಯಕ್ಷಗಾನ ಅಕಾಡೆಮಿ, ಕರ್ನಾಟಕ ಸರ್ಕಾರ

**ಮೂಲ ಪ್ರಕಾಶಕರು:** ಪದವೀಧರ ಯಕ್ಷಗಾನ ಸಮಿತಿ, ಮುಂಬೈ

**ಪ್ರಸಂಗ ಪ್ರತಿ ಆಧಾರ:** ಪದವೀಧರ ಯಕ್ಷಗಾನ ಸಮಿತಿ, ಮುಂಬೈ ಪ್ರಕಟಿತ ದೇಶಭಕ್ತ ನಾರಾಯಣ ಎಸ್. ಕಿಲ್ಲೆ ಯಕ್ಷಗಾನ ಸಂಸ್ಮರಣ ಪ್ರಸಂಗ ಮಾಲಿಕೆ ಸಂಪುಟ -೨೦

**ಪ್ರಸಂಗ ಪ್ರತಿ ಕೊಟ್ಟವರು:** ದಿನೇಶ ಉಪ್ಪೂರ ಎಂ. ಎನ್.

**ಪ್ರಸಂಗ ಪ್ರತಿ ಒದಗಣೆಗೆ ಸಹಕಾರ:** ದಿನೇಶ ಉಪ್ಪೂರ ಎಂ. ಎನ್.

**ಅಂತರಜಾಲ ಪ್ರತಿ ಬರವಣಿಗೆ:** ವಸುಮತಿ ಜಿ.

**ಅಂತರಜಾಲ ಪ್ರತಿ ತಿದ್ದುಪಡಿ:** ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ ಎಂ. ಎನ್.

**ಅಂತರಜಾಲ ಪ್ರತಿ ಉತ್ಪಾದನೆ:** ರವಿ ಮಡೋಡಿ, ನಟರಾಜ ಉಪಾಧ್ಯ, ಅಶ್ವಿನಿ ಹೊದಲ

**ಅಂತರಜಾಲ ಪ್ರತಿ ಪ್ರಕಾಶನ:** ರವಿ ಮಡೋಡಿ, ಡಾ. ಪ್ರದೀಪ ಸಾಮಗ, ನಟರಾಜ ಉಪಾಧ್ಯ